ಶ್ರೀ ಶೀನಾರ್ಳಿ ಚಂದ್ರಶೇಖರ್. (ಹೊಸನಗರ)—ಮಾನ್ಯ ಉಪಾಧ್ಯಕ್ಷರೇ, ತಮ್ಮ ಪರವಾನಿಗೆ ಪಡೆದು ಈ ಕೆಳಕಂಡ ನಿಲುವಳಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

> "ರಾಜ್ಯದಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ನೇಮಕ ಮಾಡಿದ ಮೂಲ ಶಿಫಾರಸ್ಸಿನ ಮೇರೆಗೆ ಶಿವಮೊಗ್ಗದಲ್ಲಿ "ಸಹ್ಯಾದ್ರಿ ವಿಶ್ವವಿದ್ಯಾನಿಲಯ" ಎಂಬ ಹೆಸರಿನ ಆರನೆಯ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಬೇಕೆಂದು ಈ ಸಭೆಯು ಅವಿರೋಧವಾಗಿ ನಿರ್ಣಯಿಸುತ್ತದೆ.

The question was proposed

ಶ್ರೀ ಶೀನಾರ್ಳಿ ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ, ನನಗಾದರೂ ಈ ನಿಲುವಳಿಯನ್ನು ತರಬೇಕಾದ ಅವಶ್ಯಕತೆ ಇರಲಿಲ್ಲ. ಮಾನ್ಯ ಶಂಕರರಾಯರು ಈ ಸದನದ ಮುಂದೆ ಕೊಟ್ಟಂಥ ಆಶ್ವಾಸನೆಯನ್ನು ಪೂರ್ತಿ ಮಾಡಿದ್ದರೆ ಈ ನಿಲುವಳಿಯನ್ನು ತರಬೇಕಾದ ಅವಶ್ಯಕತೆ ಖಂಡಿತ ಇರುತ್ತಿರಲಿಲ್ಲ. ಕಳೆದ ಆಯವ್ಯಯ ಅಧಿವೇಶನದಲ್ಲಿ ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ನಿಲುವಳಿಯನ್ನು ಸರ್ಕಾರ ತೆಗೆದುಕೊಂಡು ಬಂದಾಗ, ಮಲೆನಾಡು ವಿಶ್ವವಿದ್ಯಾನಿಲಯಕ್ಕೆ ಅನ್ಯಾಯ ಮಾಡುತ್ತಿದ್ದೀರೆಂದು ನಾನು ಘಂಟಾಘೋಷವಾಗಿ ಹೇಳಿದೆ. ಸಮಿತಿಯ ವರದಿ ಅನುಕೂಲವಾಗಿದ್ದರೂ ಕೂಡ ನೀವದನ್ನು ಪರಗಣನೆಗೆ ತೆಗೆದುಕೊಳ್ಳುತ್ತಿಲ್ಲವೆಂದು ನಾನು ಖಚಿತವಾಗಿ ಹೇಳಿದ್ದೇನೆ. ಜೊತೆಗೆ ಪರಿಗಣನೆಗೆ ತೆಗೆದುಕೊಳ್ಳದಿರುವುದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲವೆಂದೂ ಹೇಳಿದ್ದೆ. ಆಗ ಮಾನ್ಯ ಶಂಕರರಾಯರು ಬರುವ ವರ್ಷದಲ್ಲಿ ಶಿವಮೊಗ್ಗಕ್ಕೆ ವಿಶ್ವವಿದ್ಯಾನಿಲಯವನ್ನು ಕೊಡುತ್ತೇವೆಂದು ಹೇಳಿದರು.

ಶ್ರೀ ಜಿ.ಬಿ. ಶಂಕರರಾವ್.—ಯಾರು ಹೇಳಿದರು ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ತಾವೆ. ತಮ್ಮ ಭಾಷಣ ತೆಗೆದು ನೋಡಿ. ನಾನು ಸುಮ್ಮನೆ ಹೇಳುತ್ತಿಲ್ಲ. ನಾನು ಹೇಳಿದ್ದೂ ದಾಖಲಾಗಿದೆ ತಾವು ಹೇಳಿದ್ದೂ ದಾಖಲಾಗಿದೆ. ಬರುವ ವರ್ಷ ಖಂಡಿತ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ.

ಶ್ರೀ ಜಿ.ಬಿ ಶಂಕರರಾವ್.—ನೋಡುತ್ತೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ತೆಗೆದು ನೋಡಿ. It is a document. ನಾನು ಸುಮ್ಮನೆ ಹೇಳುತ್ತಿಲ್ಲ. ತಾವು ಖಚಿತವಾಗಿ ಹೇಳಿದ್ದೀರಿ.

೧೧-೦೦ ಎ.ಎಂ.

ವಿಶ್ವವಿದ್ಯಾನಿಲಯವನ್ನು ಬರುವ ಸಾರಿಗೆ ಕೊಡುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಕೊಟ್ಟ ಮಾತನ್ನು ನನ್ನ ಸ್ನೇಹಿತರಾದ ಶಂಕರರಾಯರು ಉಳಿಸಿಕೊಳ್ಳುತ್ತಾರೆಂನು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಉಳಿಸಿಕೊಳ್ಳಲಿಲ್ಲ. ಆದ್ದರಿಂದ ಬಲವಂತವಾಗಿ ನಾನು ಈ ನಿರ್ಣಯವನ್ನು ತರಲು ಕಾರಣ ಈಗಲಾದರೂ ಭಗವಂತ, ಶಿವ ಅವರಿಗೆ ಒಳ್ಳೆಯ ಮನಸ್ಸನ್ನು ಕೊಡಲಿ ಎಂಬುದು. ಮಾನ್ಯ ವಿದ್ಯಾ ಮಂತ್ರಿಗಳು ಈಗಲಾದರೂ ಇದನ್ನು ಒಪ್ಪತಕ್ಕ ದೊಡ್ಡ ಮನಸ್ಸು ಮಾಡಲಿ ಎಂದು ಕೇಳಿಕೊಳ್ಳುತ್ತೇನೆ. ನಾನು ಸುಮ್ಮನೆ ಈ ನಿಲುವಳಿಯನ್ನು ತರಲಿಲ್ಲ. ೧೯೬೭ನೇ ಇಸವಿಯಲ್ಲಿ ಶ್ರೀಮಾನ್ ಬದರೀನಾರಾಯಣ್ ಅವರು ವಿದ್ಯಾ ಮಂತ್ರಿಗಳಾಗಿದ್ದಾಗ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಕರ್ನಾಟಕ ರಾಜ್ಯದಲ್ಲಿರತಕ್ಕ ಮೂರು ವಿಶ್ವವಿದ್ಯಾನಿಲಯಗಳಲ್ಲದೆ ಬೇರೆ ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ಅವರು ಮಾಡಿದ್ದರು. ಅದರ ನೇತೃತ್ವವನ್ನು ಸನ್ಮಾನ್ಯ ಉಪಕುಲಪತಿಗಳಾಗಿದ್ದ ಡಿ.ವಿ. ಅರಸು ವಹಿಸಿದ್ದರು. ಅವರು ಎಲ್ಲ ಕಡೆ ಸಮೀಕ್ಷೆ ಮಾಡಿ ಪರಿಶೀಲನೆ ಮಾಡಿ ಒಂದು ವಿಹಂಗಮವಾದ ವರದಿಯನ್ನು ಸರ್ಕಾರದ ಮುಂದೆ ಕೊಟ್ಟಿದ್ದಾರೆ. ಅವರು ವರದಿಯನ್ನು ಕೊಡುವ ಹಂತದಲ್ಲಿ ಮಾನ್ಯ ಬದರೀನಾರಾಯಣ್ ಅವರು ಮಂತ್ರಿಗಳಾಗಿರಲಿಲ್ಲ. ಅದು ನಮ್ಮ ದುರ್ದೈವ. ಅವರು ಮಂತ್ರಿಗಳಾಗಿದ್ದರೆ ನಮಗೆ ಈ ಅನ್ಯಾಯ ಖಂಡಿತವಾಗಿ ಆಗುತ್ತಿರಲಿಲ್ಲವೆಂದು ಖಚಿತವಾಗಿ ಹೇಳುತ್ತೇನೆ ಏತಕ್ಕೆಂದರೆ ಅದೇ ಜಿಲ್ಲೆಯಿಂದ ಬಂದ ವ್ಯಕ್ತಿ ತನ್ನ ಜಿಲ್ಲೆಯ ವಿಶ್ವವಿದ್ಯಾನಿಲಯವನ್ನು ಕೊಡದೇ ಬೇರೆ ಕಡೆ ಕೊಡುವ ಕೆಲಸ ಮಾಡುವುದಿಲ್ಲ

ಎಂಬುದು ಖಚಿತ. ನಮ್ಮ ದುರ್ದೈವ ಅವರು ಮಂತ್ರಿಗಳಾಗಿರಲಿಲ್ಲ. ಮಾನ್ಯ ಶಂಕರರಾಯರು ಧಾರವಾಡ ಜಿಲ್ಲೆಯವರಾದರೂ ಕೂಡ ಶಿವಮೊಗ್ಗ ಜಿಲ್ಲೆಯ ಬಾರ್ಡರ್‌ನಲ್ಲೇ ಅವರ ಊರಿಗೆ. ಆದ್ದರಿಂದ ಅವರಿಗೆ ಶಿವಮೊಗ್ಗದ ಮೇಲೆ ವಿಶ್ವಾಸವಿದೆ ಎಂದು ನಾನು ಅಂದುಕೊಂಡಿದ್ದೆ. ಶಿವಮೊಗ್ಗದ ಮಾನವನ್ನು ಅವರು ಎತ್ತಿಹಿಡಿಯುತ್ತಾರೆ, ನಮ್ಮ ಕೋರಿಕೆಯನ್ನು ಈಡೇರಿಸುತ್ತಾರೆ ಎಂಬ ಭರವಸೆ ನನಗಿತ್ತು. ನಮ್ಮ ದುರ್ದೈವ ಅವರು ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ ಕೇವಲ ಗುಲ್ಬರ್ಗ, ಮಂಗಳೂರುಗಳಿಗೆ ಮಾತ್ರ ವಿಶ್ವವಿದ್ಯಾನಿಲಯವನ್ನು ಕೊಟ್ಟರು. ಈ ವರದಿಯನ್ನು ತಾವು ಅವಲೋಕಿಸಬೇಕು. ಮಾನ್ಯ ಶಂಕರರಾಯರು ಈ ಬಗ್ಗೆ ಉತ್ತರ ಕೊಡಬೇಕು. ಏತಕ್ಕೆ ಈ ಮಲತಾಯಿ ಧೋರಣೆ ? ವರದಿಯಲ್ಲಿ ಖಚಿತವಾಗಿ ಹೇಳಿದೆ.

"There has been public demand for a separate Univer sity at Shimoga. Actually, the State Government appionted a Committee in 1972 under the Chairmanship of the then Minister for Education Shri A. Badar Narayana to go into the question of establishment of Universities in the State and Committee recommended Universities at Gulbarga and Mangalore and Shimoga. The proposal was dropped mainly due to financial restraint. Now, with the establishment of Universities at Gulbarga and Mangalore, the case for the only remaining University at Shimoga becomes stronger and sooner or later the same may have to be established."

Let the Hon. Minister Sri Shankar Rao underline the word.

"Establishment at a future date will only increase the cost with rising prices.

So, he recommeded for establishment of university now itself. Any postponement will increase the cost. That is his report.

"It is therefore, for consideration whether opportunity should not be taken now alone to establish a University at Shimoga simultaneously with the establishment of Universities at Gulbarga and Mangalore."

Please underline this.

"The cost of establishment of a University at Shimoga covering districts of Chikkamagalore, Chitradurga and Shimoga will not be much as compared to the cost involved in the establishment of Universities at Mangalore and Gulbarga."

ಗುಲ್ಬರ್ಗ, ಮಂಗಳೂರು ವಿಶ್ವವಿದ್ಯಾನಿಲಯ ಮಾಡುವುದಕ್ಕಿಂತ ಕಡಿಮೆ ವೆಚ್ಚದಲ್ಲಿ ಶಿವಮೊಗ್ಗ ವಿಶ್ವವಿದ್ಯಾನಿಲಯವನ್ನು ಮಾಡಬಹುದು ಎಂದು ವರದಯಲ್ಲಿ ಹೇಳಿದೆ.

"There are lands to the extent of 400 acres at present available, and another 400 acres could be added. The number of colleges under the University will be 37 to start with.

There is no Central or Federal University in the South except in Hyderabad, and of the Universities in Karnataka the one at Shimoga will be ideal for such a University. The Government of India could be persuaded later for making it as Federal University.

A proposal to establish a University exclusively for Medicine is before the Government.

SRI G.B. SANKAR RAO.—Mr. Chairman, Sir.........

CHAIRMAN.—Let not the Hon. Minister answer now. He can make a note of it and answer later.

SRI S.M. SHEERNALLY CHANDRASHEKHAR.—

"The Commission is submitting proposals for establishment of a University exclusively for Technology besides University by Radio. It is also essential that Government makes it clear that with the establishment of these Universities there cannot be any more Universities in the State as all the regional needs have been met. Hereafter, the concentration will be only on the strict implementation of the guide-lines of the University Grants Commission in the sphere of colleges."

"The Commission would be happy to into the question in detail regarding infra-structure budget estimates of the University at Shimoga not withstanding the short time during which such details require to be worked out. If Government agrees in principle for the creation of a University at Shimoga, Section 3 of the Draft Bill creating Universities at Gulbarga and Mangalore submitted by the Commission may be amended to include Shimoga University with head quarters at Bhadra Project P.G. Centre and territorial jurisdiction comprising the districts of Chikkamagalur, Chitradurga and Shimoga and these districts deleted from the clause relating to Mysore University."

ಇಂಥ ಭವ್ಯವಾದ ವರದಿ ಸರ್ಕಾರದ ಮುಂದಿದ್ದರೂ ಕೂಡ ಆ ಶಿವ ನಮ್ಮ ಶಂಕರರಾಯರ ಗಮನಕೆ ಏತಕ್ಕೆ ತರಲಿಲ್ಲವೋ........

ಶ್ರೀ ಮಾಕ್ಯ್ಯಾರು ಆನಂದರಾವ್.—ಯಾವ ಶಿವ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನು ಪೂಜೆ ಮಾಡುವ ಶಿವ, ಅವರು ಪೂಜೆ ಮಾಡುವ ಶಿವ, ಮತ್ತು ತಾವು ಪೂಜೆ ಮಾಡುವ ಶಿವ. ತಾವು ಮಾಡುತ್ತೀರೋ ಇಲ್ಲವೋ ಗೊತ್ತಿಲ್ಲ.

CHAIRMAN.—Please finish Sri Chandrashekhar. Do not cross words.

ಶ್ರೀ ಶೀರ್ನಾಳಿ ಚಂದ್ರಶೇಖರ್.—It is only introductory. ಇಂಥ ವರದಿ ಸರ್ಕಾರದ ಮುಂದೆ ಇದ್ದರೂ ಕೂಡ ಶಿವಮೊಗ್ಗ ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕೆ ಸರ್ಕಾರ ಏತಕ್ಕೆ ಗಮನ ಕೊಡಲಿಲ್ಲವೋ ಗೊತ್ತಿಲ್ಲ. ನಮ್ಮ ದುರ್ದೈವ ಶಿವಮೊಗ್ಗ ಜಿಲ್ಲೆ ಕರ್ನಾಟಕ ಆದಾಗಿನಿಂದ ಹಿಂದೆಯೇ ಉಳಿದಿದೆ. ಒಂದು ಕಾಲದಲ್ಲಿ ಅಂದರೆ ಹಳೇ ಮೈಸೂರು ಇದ್ದಾಗ ಶಿವಮೊಗ್ಗ ಪ್ರಧಾನವಾದ ಜಿಲ್ಲೆಯಾಗಿತ್ತು. ಹಳೇ ಮೈಸೂರಿನಲ್ಲಿ ಬೆಂಗಳೂರು ಮೈಸೂರು ಬಿಟ್ಟರೆ ಶಿವಮೊಗ್ಗವೇ ಪ್ರಧಾನವಾದ ಜಿಲ್ಲೆಯಾಗಿತ್ತು ಅಂಥ ಪ್ರಾಮುಖ್ಯತೆಯನ್ನು ಹೊಂದಿದ್ದ ಶಿವಮೊಗ್ಗ ಇಂದು ಕೆಳ ಸ್ಥಾನಕ್ಕೆ ಇಳಿದಿದೆ. ಆದರೆ ನಮ್ಮ ಜಿಲ್ಲೆ ರಾಜ್ಯಕ್ಕೆ ಕೊಡತಕ್ಕ ಕೊಡುಗೆಯನ್ನು ನೆನಪು ಮಾಡಿಕೊಳ್ಳುವುದಾದರೆ ತಾವು ತಮ್ಮ ವಿಚಾರವನ್ನು ಪುನಃ ಬದಲು ಮಾಡಬೇಕಾಗುತ್ತದೆ. ಆರ್ಥಿಕ ಸಂಪನ್ಮೂಲತೆಯಲ್ಲಿ ಜಿಲ್ಲಾವಾರು ಲೆಕ್ಕ ಹಾಕಿದರೆ ಶಿವಮೊಗ್ಗ ಜಿಲ್ಲೆಯ ಕೊಡುಗೆ ಸಾಧಾರಣವೇ ? ಒಂದು ಶರಾವತಿ ಇಲ್ಲದೇ ಹೋದರೆ ನಮಗೆ ಲೈಟಿಲ್ಲ. ನಾವು ನೀವು ಇಲ್ಲಿ ಕುಳಿತು ಮಾತನಾಡುವಹಾಗಿಲ್ಲ. ಇಲ್ಲಿ ಬೆಳಕೇ ಇಲ್ಲ. ಕೈಗಾರಿಕೆಗಳಿಲ್ಲ. ಬೆಂಗಳೂರಿನಲ್ಲಿ ಎಲ್ಲ ಕಾರ್ಯಗಳೂ ಸ್ಥಗಿತವಾಗುತ್ತದೆ. ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟನ್ನು ಮುಚ್ಚಬೇಕಾಗುತ್ತದೆ. ದೇಶದಲ್ಲಿರತಕ್ಕ ಅತ್ಯಂತ ಹೆಚ್ಚಿಗೆ ವಿದ್ಯುಚ್ಛಕ್ತಿ ಸಂಪನ್ಮೂಲ ಏನಿದೆ ಅದನ್ನು ಜಿಲ್ಲೆ ಕೊಡುತ್ತಿದೆ. ಹಾಗಾದರೆ ನಮ್ಮ ತ್ಯಾಗಕ್ಕೆ ಬೆಲೆ ಇಲ್ಲವೇ ? ನನ್ನ ತಾಲ್ಲೂಕು ಇದೆಯಲ್ಲ, ಈ ಹೊಸನಗರ ಸಂಪೂರ್ಣವಾಗಿ ಶರಾವತಿ ನೀರಿನಿಂದ ಆವೃತವಾಗಿದೆ. ಎಲ್ಲೋ ಅಲ್ಪಸ್ವಲ್ಪ ಉಳಿದುಕೊಂಡಿರಬಹುದು. ಶಿವಮೊಗ್ಗ ಹೊಸನಗರ ಎರಡೂ ತಾಲ್ಲೂಕು ಸೇರಿಸಿ ನನ್ನ ಕ್ಷೇತ್ರವಾಗುತ್ತದೆ. ನಮ್ಮ ಕೊಡುಗೆ ದೇಶಕ್ಕೆ ಏನು ಎಂಬುದನ್ನು ತಾವೆಲ್ಲಾ ಅರ್ಥ ಮಾಡಿಕೊಳ್ಳಬೇಕು.

MR. CHAIRMAN.—I want the Member to go back to the subject please.

SRI SHEERNALY CHANDRASHEKHAR.—I am sorry. After assuming the Chair you have changed the voice.

MR. CHAIRMAN.—No comments. Please come back to the subject.

† ಶ್ರೀ ಶೀರ್ನಾಳಿ ಚಂದ್ರಶೇಖರ್.— ಇವತ್ತು ನಮ್ಮ ಕೊಡುಗೆ ಅಷ್ಟಿಷ್ಟಲ್ಲ. ಬೇಕಾದರೆ ನೀವು ಲೆಕ್ಕ ಹಾಕಿಕೊಳ್ಳಿ. ಹೊಸನಗರ ಒಂದರಲ್ಲೇ ವರಾಹಿ, ಚಕ್ರಾ, ಸಾವೆಹೊಕ್ಕಲು, ಶರಾವತಿ ಎಲ್ಲಾ ನದಿಗಳಿಂದ ನೀರು ಆವೃತವಾಗಿದ್ದು ಅಲ್ಲಿನ ಜನ ತತ್ತರಿಸಿ ಹೋಗಿದ್ದಾರೆ. ತೀರ್ಥಹಳ್ಳಿಯಲ್ಲಿ ಅಪ್ಪರ್ ತುಂಗಾ ಯೋಜನೆಯನ್ನು ತೆಗೆದುಕೊಂಡು ಆ ಊರನ್ನು ಮುಳುಗಿಸಿದ್ದಾರೆ. ಹಾಗಾದರೆ ನಾವು ಜಾಗಕ್ಕೆ ಮಾತ್ರ ನೀಸಲೆ ? ನಮ್ಮ ಉತ್ಪತ್ತಿ ಕರ್ನಾಟಕ ರಾಜ್ಯಕ್ಕೆ ಎಷ್ಟು? ಭದ್ರಾವತಿ ವಿ.ಐ.ಎಸ್.ಎಲ್.ನಿಂದ ಆಗುತ್ತಿರುವ ಉತ್ಪತ್ತಿ, ಪೇಪರ್‌ಮಿಲ್‌ನಿಂದ, ಸಿಮೆಂಟ್ ಫ್ಯಾಕ್ಟರಿಯಿಂದ, ಸಕ್ಕರೆ ಕಾರ್ಖಾನೆಯಿಂದ ಆಗುತ್ತಿರುವ ಉತ್ಪತ್ತಿ ಎಷ್ಟು ಎಂಬುದನ್ನು ಲೆಕ್ಕ ಹಾಕಿ. ಇದಲ್ಲದೆ ಅರಣ್ಯ ಸಂಪತ್ತಿನಿಂದ ನಮ್ಮ ರಾಜ್ಯಕ್ಕೆ ನೀಡುತ್ತಿರುವ ಕೊಡುಗೆಯನ್ನು ವಿಚಾರ ಮಾಡುವುದಾದರೆ ನಮಗೆ ಮಾಡತಕ್ಕ ಅನ್ಯಾಯ ಸರಿಯೋ ಎಂದು ಆಲೋಚನೆ ಮಾಡಬೇಕಾಗುತ್ತದೆ. ನಮ್ಮ ಶಿವಮೊಗ್ಗ ಜಿಲ್ಲೆಯನ್ನು ಅಷ್ಟು ಸುಲಭವಾಗಿ ಕಡೆಗಾಣಿಸುವ ಹಾಗೆ ಇಲ್ಲ. ಆದರೆ ನಾಯಕತ್ವದಲ್ಲಿ ಭಿನ್ನಾಭಿಪ್ರಾಯ ಇದ್ದುದರಿಂದ ಅದರಲ್ಲಿ ಏನಾದರೂ ತಾವು ದುರುಪಯೋಗ ಪಡೆದು ಮಣ್ಣು ಮುಕ್ಕಿಸುತ್ತಿದ್ದೀರೆಂಬ ಮಾತನ್ನು ಹೇಳಬೇಕಾಗಿದೆ. ಇದು ನಮ್ಮ ದೌರ್ಭಾಗ್ಯ. ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ಹನುಮಂತಯ್ಯನವರು ಇದ್ದ ಕಾಲದಿಂದಲೂ ಏಕಾಏಕಿಯಾಗಿ ಶಿವಮೊಗ್ಗ ಜಿಲ್ಲೆಯನ್ನು ಕಡೆಗಣಿಸಲಾಗುತ್ತಿದೆ. ಆ ಕಾಲದಲ್ಲೇ ಅಲ್ಲಿಗೆ ಮೆಡಿಕಲ್ ಕಾಲೇಜ್ ಆಗಬೇಕೆಂದು ೧೦ ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿದ್ದು ಅದು ಇವತ್ತಿಗೂ ಜಿಲ್ಲಾಧಿಕಾರಿಗಳ ಅಕೌಂಟಿನಲ್ಲಿ ಕೊಳೆಯುತ್ತಿದೆ. ನಮಗೆ ಎಲ್ ಎಲ್.ಬಿ . ಕಾಲೇಜನ್ನು ಕೊಟ್ಟರೇ ವಿನಹ ಮೆಡಿಕಲ್ ಕಾಲೇಜನ್ನು ಕೊಡಲಿಲ್ಲ. ಆದರೆ ಬೇರೆ ಜಿಲ್ಲೆಗಳಿಗಾದರೆ ಕೊಟ್ಟಿದ್ದೀರಿ.

† Indicates that remarks or speeches have not been revised by the member concerned.

ಏಕೆ ಈ ಮಲತಾಯಿ ಧೋರಣೆ ? ನಾವು ಈ ದೇಶದ ಪ್ರಜೆಗಳಲ್ಲವೆ ? ನಾವು ರಾಜ್ಯಕ್ಕೆ ತೆರಿಗೆಯನ್ನು ಕೊಡುವುದಿಲ್ಲವೆ ? ಶಿವಮೊಗ್ಗ ಜಿಲ್ಲೆಗೆ ಇತಿಹಾಸ ಇಲ್ಲವೆ ? ಅದು ಈ ರಾಜ್ಯವನ್ನು ಒಂದಾನೊಂದು ಕಾಲದಲ್ಲಿ ಆಳುತ್ತಿದ್ದಂತಹ ಸಂಸ್ಥಾನ. ನನ್ನ ಕ್ಷೇತ್ರವೇ ಆಗಿನ ರಾಜಧಾನಿಯಾಗಿತ್ತು. ಅಂಥ ಇತಿಹಾಸ ಪರಂಪರೆ ಇರತಕ್ಕ ನಾಡು ಅದು. ಈ ದೇಶಕ್ಕೆ ಉನ್ನತ ಸಾಹಿತಿಗಳನ್ನು ಕೊಟ್ಟಂತಹ ನಾಡು. ಶ್ರೀಯುತರುಗಳಾದ ಕುವೆಂಪು, ಪರಮೇಶ್ವರ ಭಟ್ಟರು, ಅಡಿಗರು ಎಲ್ಲರೂ ಶಿವಮೊಗ್ಗ ಜಿಲ್ಲೆಯವರೆ. ಶಾಸನ ಸಭೆಯಲ್ಲಿ ಕೂಡ ಶಿವಮೊಗ್ಗ ಜಿಲ್ಲೆಯ ಉತ್ತಮ ಶಾಸಕರಿದ್ದರು. ಶ್ರೀಮಾನ್ ಶಾಂತವೇರಿ ಗೋಪಾಲಗೌಡರು, ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಇವರೆಲ್ಲ ಅಲ್ಲಿಯವರೆ. ಹೀಗೆ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಅಲ್ಲೆಲ್ಲ ಶಿವಮೊಗ್ಗ ಜಿಲ್ಲೆಯವರಿದ್ದಾರೆ. ಇಷ್ಟೆಲ್ಲ ಇದ್ದರೂ ಕೂಡ ನಮ್ಮ ಜಿಲ್ಲೆಯನ್ನು ಕಡೆಗಣಿಸಿರುವುದು ಶೋಚನೀಯ. ಅಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಬೇಕಾದಂತಹ ಅವಶ್ಯಕತೆಗಳು ಇವೆಯೋ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು. ಹಾಗೆ ಪರಿಶೀಲಿಸಿದಾಗಲೂ ವಿಶ್ವವಿದ್ಯಾನಿಲಯ ಸ್ಥಾಪನೆಯ ಅಗತ್ಯ ಕಂಡುಬರುತ್ತದೆ. ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು ೩೮ ಕಾಲೇಜುಗಳಿವೆ. ಶಿವಮೊಗ್ಗದಲ್ಲೇ ಸ್ನಾತಕೋತ್ತರ ಪದವಿ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳು ಎಲ್ಲ ಇವೆ ; ೪–೬ ಪ್ರಥಮ ದರ್ಜೆ ಕಾಲೇಜುಗಳಿವೆ. ಸಾಗರ, ತೀರ್ಥಹಳ್ಳಿ, ಭದ್ರಾವತಿಯಲ್ಲೆಲ್ಲ ಪ್ರಥಮ ದರ್ಜೆ ಕಾಲೇಜುಗಳಿವೆ. ಇಷ್ಟೆಲ್ಲ ಇದ್ದರೂ ಕೂಡ ಅಲ್ಲಿಗೆ ವಿಶ್ವವಿದ್ಯಾನಿಲಯವನ್ನು ಕೊಡುವುದಕ್ಕೆ ಏತಕ್ಕೆ ಹಿಂಜರಿಯುತ್ತಿದ್ದಾರೆಂಬುದು ತಿಳಿಯುತ್ತಿಲ್ಲ. ಹೀಗಿದ್ದರೂ ಏಕೆ ಕೊಡಲಿಲ್ಲ ? ಹಾಗಾದರೆ, ನನ್ನ ಮೇಲೆ ಏನೋ ವೈಮನಸ್ಸು ಇರಬೇಕು !

ಒಬ್ಬರು ಮಾನ್ಯ ಸದಸ್ಯರು. – ಇಲ್ಲ ; ಪ್ರೇಮ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಅಲ್ಲ, ಅತಿ ಪ್ರೇಮ ಅತಿ ಪ್ರೇಮ ಇದ್ದರೆ ಕೊಟ್ಟರೂ ಆಗುತ್ತದೆ, ಬಿಟ್ಟರೂ ಆಗುತ್ತದೆಂಬ ಭಾವನೆ ಬರುತ್ತದೆ ಆ ದೃಷ್ಟಿಯಿಂದ ತಾವು ನಮ್ಮನ್ನು ಈ ರೀತಿ ಕಡೆಗಣಿಸಿದ್ದೀರೋ ಏನೋ ಅರ್ಥವಾಗುತ್ತಿಲ್ಲ. ಈಗ ವಿಶ್ವವಿದ್ಯಾನಿಲಯಗಳನ್ನು ಕೊಟ್ಟಿರತಕ್ಕ ಪ್ರದೇಶಗಳನ್ನು ನೋಡುವುದಾದರೆ, ಆರ್ಥಿಕ ಮುಗ್ಗಟ್ಟು ಇರತಕ್ಕ ಕಾಲದಲ್ಲಿ ಕಡಿಮೆ ವೆಚ್ಚದಲ್ಲಿ ಆಗತಕ್ಕದ್ದನ್ನು ಬಿಟ್ಟು ಅಧಿಕ ವೆಚ್ಚ ತಗಲತಕ್ಕ ಪ್ರದೇಶಗಳಾದ ಮಂಗಳೂರು ಮತ್ತು ಗುಲ್ಬರ್ಗಕ್ಕೆ ವಿಶ್ವವಿದ್ಯಾನಿಲಯಗಳನ್ನು ಕೊಡಲು ಕಾರಣವೇನು ? ಕಡಿಮೆ ವೆಚ್ಚದಲ್ಲಿ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬಹುದೆಂದು ಗೊತ್ತಿದ್ದರೂ ಕೂಡ ಅದಕ್ಕೆ ಮೊದಲನೆ ಆದ್ಯತೆ ನೀಡದೆ ಮಂಗಳೂರು ಮತ್ತು ಗುಲ್ಬರ್ಗದಲ್ಲಿ ಏತಕ್ಕೆ ಮಾಡಿದಿರಿ ಎಂದು ಕೇಳುತ್ತೇನೆ ನಾವು ಏನು ಅನ್ಯಾಯ ಮಾಡಿದ್ದೇವೆ ? ಆರ್ಥಿಕ ಧೋರಣೆಯನ್ನು ಅರ್ಥ ಮಾಡಿಕೊಂಡು ಶಿವಮೊಗ್ಗಕ್ಕೆ ಮೊದಲು ವಿಶ್ವವಿದ್ಯಾನಿಲಯವನ್ನು ಕೊಡಬೇಕಾಗಿತ್ತು ; ನಂತರ ಬೇರೆಯದಕ್ಕೆ ಯೋಚನೆ ಮಾಡಬೇಕಾಗಿತ್ತು. ಸರ್ಕಾರದ ನೀತಿಯನ್ನು ನಾನು ವಿರೋಧಿಸುತ್ತಿದ್ದೇನೆಂದು ಅಲ್ಲ ; ಆದರೆ ಏತಕ್ಕೆ ಹಾಗಾಗುತ್ತಿದೆಯೋ ಗೊತ್ತಿಲ್ಲ. ಯಾವುದಾದರೂ ಒಂದು ಯೋಜನೆಯನ್ನು ಮಾಡಬೇಕೆಂದುದ್ದನ್ನು ಅದೇ ರೀತಿ ಪೂರೈಸಿದರೆ ಎಷ್ಟೋ ಖರ್ಚುವೆಚ್ಚಗಳು ಕಡಿಮೆಯಾಗುತ್ತವೆ. ಒಂದು ವೇಳೆ ಮುಂದುವರಿಸಿಕೊಂಡು ಹೋದರೆ ನೂರು ರೂಪಾಯಿಗಳಲ್ಲಾಗುವುದಕ್ಕೆ ೧೦ ಸಾವಿರ ರೂಪಾಯಿ ಬೇಕಾಗುತ್ತದೆ. ಅವತ್ತಿನ ದಿವಸ ಮಾನ್ಯ ಹನುಮಂತಯ್ಯನವರು ವಿಧಾನ ಸೌಧವನ್ನು ಕಟ್ಟದೆ ಇದ್ದು ಇವತ್ತಿನ ದಿವಸ ಕಟ್ಟಬೇಕೆಂದಿದ್ದರೆ ೨೫–೩೦ ಕೋಟಿ ರೂಪಾಯಿಗಳು ಬೇಕಾಗುತ್ತಿತ್ತು. ಈ ದೃಷ್ಟಿಯಿಂದ ದೇಶದ ಹಿತಸಾಧನೆ ಆಗತಕ್ಕ ಕೆಲಸಕಾರ್ಯಗಳಿಗೆ ನಮ್ಮ ಸರ್ಕಾರ ಏತಕ್ಕಾಗಿ ಹಿಂದೆ ಮುಂದೆ ನೋಡುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಒಂದು ನಿಷ್ಠೆಯಿಂದ ಕಾರ್ಯಕ್ರಮವನ್ನು ಹಾಕಿಕೊಂಡು ಖಚಿತವಾಗಿ ತೀರ್ಮಾನ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದೆಂದು ಕೇಳುತ್ತೇನೆ. ಇವತ್ತು ಮಾನ್ಯ ಪಟೇಲರು, ಶ್ರೀನಿವಾಸ್‌ರವರು ಇಲ್ಲದಿರುವುದು ಬಹಳ ದುರ್ದೈವ. ಅವರು ಇದ್ದಿದ್ದರೆ ಎರಡು ಭುಜಬಲದಷ್ಟು ಸಮರ್ಥನೆ ಮಾಡಬಹುದಾಗಿತ್ತು.

ಒಬ್ಬ ಮಾನ್ಯ ಸದಸ್ಯರು.—ಇದ್ದಾರಲ್ಲ !

ಶ್ರೀ ಶೀರ್ನಾಳಿ ಚಂದ್ರಶೇಖರ್. –ಸದನದಲ್ಲಿ ಇಲ್ಲ. ಸುತ್ತ ನೋಡಿದರೆ ನಮ್ಮ ಜಿಲ್ಲೆಯ ಶಾಸಕರು ಯಾರೂ ಇಲ್ಲ. ಆದ್ದರಿಂದ, ನಾನು ಈಗ ಏಕೈಕ ಅಭಿಮನ್ಯುವಿನ ಹಾಗೆ ಮಾನ್ಯ ಶಂಕರರಾಯರ ಹತ್ತಿರ ಹೋರಾಟ ಮಾಡಬೇಕಾಗಿದೆ ; ಕೈಕಾಲು ಮುರಿಸಿಕೊಳ್ಳಬೇಕಾಗಿದೆ ! ನಮ್ಮ ಜಿಲ್ಲೆಯವರಾಗಿ ಆ ಕಡೆಯೂ ಇಲ್ಲ, ಈ ಕಡೆಯೂ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಯಾರಿಲ್ಲದಿದ್ದರೂ ಇವರಿಗೇ ಬೇಕಾದಷ್ಟು ಶಕ್ತಿ ಇದೆ. ಸ್ವಲ್ಪ ಹಿಂದಿರುಗಿ ನೋಡಿ, ಮಾನ್ಯ ಬಂಗಾರಪ್ಪನವರು ಕುಳಿತಿದ್ದಾರೆ. ಅವರು ನಿಮ್ಮ ಜಿಲ್ಲೆಯವರೇ ; ಅದ್ಭುತ ಬೆಂಬಲ ನಿಮಗೆ ಇದೆ.

† ಶ್ರೀ ಶೀರನಾಳಿ ಚಂದ್ರಶೇಖರ್.—ಮಾನ್ಯ ಬಂಗಾರಪ್ಪನವರು ಇದ್ದಾರೆ, ಸಂತೋಷ. ಈ ಬಗ್ಗೆ ಅವರು ಸಮರ್ಥನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ಮಂತ್ರಿ ಮಂಡಲದಲ್ಲಿದ್ದಾಗ ಈ ವರದಿ ಬಂತು. ಈ ಬಗ್ಗೆ ಕ್ಯಾಬಿನೆಟ್ ತೀರ್ಮಾನ ಕೂಡ ಅವರು ಇದ್ದಾಗಲೇ ಆಯಿತೆಂದು ಕಾಣಿಸುತ್ತದೆ. ಆಗ ಏಕೆ ಮಾನ್ಯ ಬಂಗಾರಪ್ಪನವರು ಹೋರಾಟ ಮಾಡಲಿಲ್ಲವೆಂದು ಆಶ್ಚರ್ಯಪಡುತ್ತೇನೆ. ಈಗ ಅವರೇ ಇರುವುದರಿಂದ ಹೇಳಲಿ. ಕ್ಯಾಬಿನೆಟ್ ತೀರ್ಮಾನದ ಪ್ರಕಾರ ಗುಲ್ಬರ್ಗ, ಮಂಗಳೂರು, ...

ಛೇರ್ಮನ್.—ಕ್ಯಾಬಿನೆಟ್ಟಿನ ತೀರ್ಮಾನ ಗುಟ್ಟಾಗಿರುತ್ತದೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿರ ಬಹುದು.

ಶ್ರೀ ಶೀರನಾಳಿ ಚಂದ್ರಶೇಖರ್.—ನನಗೆ ಗೊತ್ತಿದೆ. ನಮ್ಮ ಜಿಲ್ಲೆಯ ಮಂತ್ರಿಗಳಾಗಿದ್ದ ಮಾನ್ಯ ಬಂಗಾರಪ್ಪನವರು ಕ್ಯಾಬಿನೆಟ್ಟಿನಲ್ಲಿದ್ದರು. ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಿಗಿಂತ ಕಡಿಮೆ ವೆಚ್ಚದಲ್ಲಿ ಶಿವಮೊಗ್ಗ ವಿಶ್ವವಿದ್ಯಾನಿಲಯ ಆಗುತ್ತಿತ್ತು. ಅದನ್ನು ಬಿಟ್ಟು ಅವುಗಳನ್ನು ಏಕೆ ತೆಗೆದುಕೊಂಡರು ? ಆದುದರಿಂದ, ಈಗ ಅವರೇ ಇರುವಾಗ ಅವರೇ ಈ ಬಗ್ಗೆ ಹೇಳಲಿ ಎಂದು ಕೇಳು ತ್ತೇನೆ. ಅವರು ಸಮರ್ಥನೆ ಮಾಡಿರಬಹುದು ; ಆದರೆ ಯಾವ ಕಾರಣಕ್ಕಾಗಿ ಕೊಡಲಿಲ್ಲವೋ ಗೊತ್ತಿಲ್ಲ. ಶಿವಮೊಗ್ಗ ಜಿಲ್ಲೆ ಕರ್ನಾಟಕದ ಕೇಂದ್ರದಲ್ಲಿದೆ ಎಂಬುದನ್ನು ಬೇಕಾದರೆ ಮ್ಯಾಪ್ ತೆಗೆದುಕೊಂಡು ನೋಡಿ. ಅದು ರಾಜಧಾನಿಯಾಗುವುದಕ್ಕೂ ಯೋಗ್ಯ ಸ್ಥಳ. ಎಲ್ಲ ಬಸ್ಸುಗಳು ಕೂಡ ಶಿವಮೊಗ್ಗದ ಮುಖಾಂತರವೇ ಬರುತ್ತವೆ.

ಶ್ರೀ ಎಸ್. ಬಂಗಾರಪ್ಪ. - ಸನ್ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಕುಳಿತಾಗ ವಿಷಯ ಪ್ರಸ್ತಾಪಕ್ಕೆ ಬಂದದ್ದು ಸಂತೋಷ. ನಾನು ಯಾವುದೂ ಮಾತನಾಡುತ್ತಿರಲಿಲ್ಲ ಆದರೆ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಿಂದ ಮಧ್ಯೆ ನಾನು ಪ್ರವೇಶ ಮಾಡಬೇಕಾಯಿತು ; ಅದಕ್ಕೆ ಕ್ಷಮೆ ಕೇಳುತ್ತೇನೆ.

ನಾನು ಮಂತ್ರಿಮಂಡಲದಲ್ಲಿದ್ದಾಗ ಈ ವಿಷಯ ಪ್ರಸ್ತಾಪಕ್ಕೆ ಬಂತು. ಗುಲ್ಬರ್ಗ ಮತ್ತು ಮಂಗಳೂರಿನಲ್ಲಿ ವಿಶ್ವವಿದ್ಯಾನಿಲಯಗಳನ್ನು ಹೊಸದಾಗಿ ಸ್ಥಾಪಿಸಬೇಕೆಂಬ ವಿಷಯ ಬಂದಾಗ ಮಲೆನಾಡಿನ ಭಾಗಕ್ಕೆ ಸಂಬಂಧಪಟ್ಟ ಹಾಗೆ ಶಿವಮೊಗ್ಗದಲ್ಲೂ ಕೂಡ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂಬ ವಿಷಯ ಪ್ರಸ್ತಾಪಕ್ಕೆ ಬಂತು ಅದೇ ರೀತಿ ಮಾಡಬೇಕೆಂಬ ಅಭಿಪ್ರಾಯ ಕೂಡ ಇತ್ತು. ಈ ಬಗ್ಗೆ ಮಂತ್ರಿಮಂಡಲದಲ್ಲಿ ನಡೆದಿರತಕ್ಕ ಗೌಪ್ಯ ವಿಷಯಕ್ಕೆ ನಾನು ಹೋಗುವುದಿಲ್ಲ. ವಿಶ್ವವಿದ್ಯಾನಿಲಯದ ಅವಶ್ಯಕತೆಯ ಆಧಾರದ ಮೇಲೆ ಅನೇಕ ವಿವರಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ನಾನು ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದೆ. ಈ ಬಗ್ಗೆ ಸರ್ಕಾರದ ಅಭಿಪ್ರಾಯ ವ್ಯಕ್ತಪಡಿಸು ವಾಗ ಅದಕ್ಕೆ ವಿದ್ಯಾ ಸಚಿವರು, ಹಣಕಾಸಿನ ಸಚಿವರು ಹಾಗೂ ಮುಖ್ಯ ಮಂತ್ರಿಗಳು ಪಾಲುಗಾರರು. ಶಿವಮೊಗ್ಗದಲ್ಲಿ ಮಲೆನಾಡು ವಿಶ್ವವಿದ್ಯಾನಿಲಯವೆಂದು ಮಾಡಬೇಕೆಂಬ ಅಭಿಪ್ರಾಯಕ್ಕೆ ಸರ್ಕಾರ ಬದ್ಧ ವಾಗಿದೆ ಎಂಬ ತೀರ್ಮಾನವಾಗಿತ್ತು. ಮಂತ್ರಿಮಂಡಲದ ತೀರ್ಮಾನ ಬರವಣಿಗೆಯಲ್ಲಿ ಆಗದಿದ್ದರೂ ಅಭಿಪ್ರಾಯ ವ್ಯಕ್ತವಾಗಿತ್ತು. ಹೀಗೆ ಮೂರೂ ಕಡೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬೇಕೆಂಬ ಅಭಿಪ್ರಾಯಕ್ಕೆ ಬಂದ ಮೇಲೆ ಈ ವರ್ಷ ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಲಿ ಮತ್ತು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಲೆನಾಡಿನ ಕೇಂದ್ರ ಸ್ಥಾನವಾದ ಶಿವಮೊಗ್ಗ ದಲ್ಲಿ ಸ್ಥಾಪನೆಯಾಗಲಿ ಎಂದು ಆಯಿತು ವಿನಹ ಶಿವಮೊಗ್ಗದಲ್ಲಿ ಸ್ಥಾಪನೆ ಮಾಡಬಾರದೆಂಬ ಅಭಿಪ್ರಾಯ ಇರಲಿಲ್ಲ ಈ ಮೂರೂ ಕಡೆಗಳಲ್ಲಿ ವಿಶ್ವವಿದ್ಯಾನಿಲಯಗಳು ಆಗಬೇಕೆಂಬ ವಿಷಯದಲ್ಲಿ ಯಾರೂ ವಿರೋಧವನ್ನು ವ್ಯಕ್ತಪಡಿಸಲಿಲ್ಲ. ಈ ವರ್ಷ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಲಿ ಮತ್ತು ಮುಂದಿನ ವರ್ಷ ಶಿವಮೊಗ್ಗ ವಿಶ್ವವಿದ್ಯಾನಿಲಯ ಪ್ರಾರಂಭವಾಗಬೇಕೆಂಬ ತೀರ್ಮಾನವಾಗಿತ್ತು.

ಆದುದರಿಂದ ಮಾನ್ಯ ಸಚಿವರು ಉತ್ತರ ಕೊಡತಕ್ಕ ಕಾಲದಲ್ಲಿ ಈ ವರ್ಷ ಶಿವಮೊಗ್ಗದಲ್ಲಿ ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಾರೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಹೇಳಿದ ಹಾಗೆ ನಾನು ಕ್ಯಾಬಿನೆಟ್‌ನಲ್ಲಿದ್ದಾಗ ಇದರ ಬಗ್ಗೆ ಪ್ರಯತ್ನ ಮಾಡಿದೆ ಎನ್ನತಕ್ಕದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಮಾತನಾಡಲು ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಮಾನ್ಯ ಬಂಗಾರಪ್ಪನವರನ್ನು ವಂದಿಸುತ್ತೇನೆ. ನಾನು ಪ್ರಸ್ತಾಪ ಮಾಡಿ ಹೇಳಿದ ಸಂದರ್ಭದಲ್ಲಿ ಅವರು ಇರಲಿಲ್ಲವೆಂದು ಕಾಣುತ್ತದೆ. ಆದುದರಿಂದ ಈ ರಿಪೋರ್ಟ್‌ನನ್ನು ಇನ್ನೊಮ್ಮೆ ಓದುತ್ತೇನೆ.

"The cost of the establishment of a University at Shimoga covering the districts of Chickmagalur, Chitradurga and Shimoga will not be much as compared to the cost involved in the establishment of a University at Mangalore and Gulbarga." ಗುಲ್ಬರ್ಗ, ಮಂಗಳೂರು ಯೂನಿವರ್ಸಿಟಿಗಿಂತ ಈ ಯೂನಿವರ್ಸಿಟಿಗೆ ಬಹಳ ಕಡಿಮೆ ವೆಚ್ಚದಲ್ಲಿ ಆಗುತ್ತದೆಂದು ವರದಿಯಲ್ಲಿಯೇ ಹೇಳಿರುವಾಗ, ಇದನ್ನು ಬಿಟ್ಟು ಆ ಎರಡು ಯೂನಿವರ್ಸಿಟಿಗಳನ್ನು ಏತಕ್ಕೆ ತೆಗೆದುಕೊಂಡಿರಿ ಎಂದು ನನ್ನ ಪ್ರಶ್ನೆ. ನಾನು ಕಳೆದ ಬಾರಿ ಮಾತನಾಡಿದಾಗ ಈ ವರ್ಷ ಪ್ರಾರಂಭ ಮಾಡುತ್ತೇವೆಂದು ಮಾನ್ಯಶ್ರೀ ಶಂಕರ್ ರಾವ್ ರವರು ಹೇಳಿದ್ದರು, ಈಗ ಮಾನ್ಯ ಶ್ರೀ ಬಂಗಾರಪ್ಪನವರು ಸಹ ಹಿಂದೆ ಕ್ಯಾಬಿನೆಟ್‌ನಲ್ಲಿ ಚರ್ಚೆ ನಡೆದು ಈ ವರ್ಷ ಶಿವಮೊಗ್ಗದಲ್ಲಿ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವ ಬಗ್ಗೆ ತೀರ್ಮಾನವಾಗಿತ್ತು ಎಂದು ಹೇಳಿದರು. ಆದುದರಿಂದ ಈ ವರ್ಷ ಶಿವಮೊಗ್ಗದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆಂದು ವಿದ್ಯಾಮಂತ್ರಿಗಳವರು ಹಿಂದೆಯೇ ಆಶ್ವಾಸನೆಯನ್ನು ಕೊಟ್ಟಿರುವುದರಿಂದ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮತ್ತೆ ಇದಕ್ಕಾಗಿ ಅವರ ಒಂದು ವಿಗ್ರಹವನ್ನು ಶಿವಮೊಗ್ಗದಲ್ಲಿ ಮಾಡುತ್ತೇವೆಂದು ಹೇಳಿದ್ದೆ, ವರದಿ ತೆಗೆದು ನೋಡಿ ಗೊತ್ತಾಗುತ್ತದೆ. ನಾನು ಇಲ್ಲಿಯವರೆಗೆ ಕಾದು ಕಾದು ನೋಡಿದೆ ಆದರೆ ವಿದ್ಯಾಮಂತ್ರಿಗಳವರಿಂದ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಸೂಚನೆ ಕಂಡು ಬರಲಿಲ್ಲ. ನನ್ನ ಶಾಸನ ಸಭಾ ಅವಧಿಯಲ್ಲಿ ಅಲ್ಲ ನನ್ನ ಆಯುಸ್ಸು ಇರುವುದರೊಳಗಾದರೂ ಅಲ್ಲಿಗೆ ವಿಶ್ವವಿದ್ಯಾನಿಲಯವನ್ನು ಕೊಡುತ್ತಾರೆ ಎನ್ನುವ ಆಶೆ ಇದೆ.

ಶ್ರೀ ಮಳ್ಳೂರು ಆನಂದರಾವ್.—ವ್ಯಕ್ತಿ ಜೀವಂತ ಆಗಿದ್ದಾಗ ಸ್ಟ್ಯಾಚ್ಯು ಮಾಡಿಸಿದರೆ ಅದರಿಂದ ಅವರಿಗೆ ಒಳ್ಳೆಯದಾಗುವುದಿಲ್ಲ. ಹೀಗಾಗಿ ಅವರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಮಾನ್ಯ ಶ್ರೀ ಶಂಕರ್‌ರಾವ್‌ರವರ ಸ್ಟ್ಯಾಚುವನ್ನು ಇಟ್ಟರೆ ಇಂಥವರ ಕಾಲದಲ್ಲಿ ಆಯಿತು ಎನ್ನುತಕ್ಕ ಕೀರ್ತಿ ಅವರಿಗೆ ಬರುತ್ತದೆ. ಮತ್ತೆ ಶ್ರೀಮಾನ್ ಶಂಕರ್‌ರಾವ್‌ರವರಿಗೆ ನನ್ನ ಮೇಲೆ ಬಹಳ ವಿಶ್ವಾಸವಿದೆ ನಾವು ಅವರು ಕೆಪಿಸಿಸಿಯಿಂದ ಒಟ್ಟಿಗೆ ಇದ್ದವರು.

MR. CHAIRMAN.—We will try to erect the statues of both o you.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಸ್ವಲ್ಪ ದಿವಸ ನಮ್ಮನ್ನು ಬಿಟ್ಟು ಅವರು ಹೋಗಿದ್ದರು ಮತ್ತೆ ನಾವು ಅವರು ಒಂದಾಗಿದ್ದೇವೆ. ಅವರ ಚೇಂಬರಿಗೆ ಹೋದಾಗಲೆಲ್ಲಾ ಚಂದ್ರಶೇಖರ್ ರವರೇ ಖಂಡಿತವಾಗಿಯೂ ಮುಂದಿನ ವರ್ಷ ಶಿವಮೊಗ್ಗ ವಿಶ್ವವಿದ್ಯಾನಿಲಯವನ್ನು ಮಾಡಿ ಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು. 'ದಯೆಯೇ ಧರ್ಮದ ಮೂಲವಯ್ಯಾ' ಎಂದು ಬಸವಣ್ಣನವರು ಹೇಳಿದ್ದಾರೆ, ತಮಗೆ ನಮ್ಮ ಮೇಲೆ ಇನ್ನೂ ದಯೆ ಬಾರದಿದ್ದರೆ ಹೇಗೆ? ಆದುದರಿಂದ ಈ ವರ್ಷವಾದರೂ ನಮ್ಮ ಶಿವಮೊಗ್ಗ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿ ನಮ್ಮನ್ನು ಪಾಮರರನ್ನಾಗಿ ಮಾಡಿ ಎಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಂಡು ಮಾನ್ಯ ಚೇರ್ಮನ್‌ರವರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರಾದ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ಒಂದು ಖಾಸಗಿ ನಿರ್ಣಯವನ್ನು ತಂದು ಒಂದು ಮುಕ್ತವಾದ ಚಿಂತನೆಗೆ ಮುಕ್ತವಾದ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಗೆ ಒಂದು ವಿಶ್ವ ವಿದ್ಯಾನಿಲಯ ಪ್ರತ್ಯೇಕವಾಗಿ ಬೇಕೆಂದು ಒತ್ತಾಯ ಮಾಡಿದ್ದಾರೆ. ಮತ್ತೆ ಅಧಿಕೃತವಾಗಿ ವರದಿಯಲ್ಲಿರ ತಕ್ಕದ್ದನ್ನು ಸಭೆಯ ಮುಂದಿಟ್ಟಿದ್ದಾರೆ, ಈಗಾಗಲೇ ಕರ್ನಾಟಕದಲ್ಲಿ ೫ ವಿಶ್ವವಿದ್ಯಾನಿಲಯಗಳು ಇವೆ. ಈಗ ೬ನೇ ವಿಶ್ವವಿದ್ಯಾನಿಲಯ ಬೇಕು ಎಂದು ಬೇಡಿಕೆ ಬಂದಿದೆ, ಬಹುಶಃ ೬ನೇ ವಿಶ್ವವಿದ್ಯಾನಿಲಯವಾಗಿ ಇದೇ ಕೊನೆಯ ಬೇಡಿಕೆಯಾಗಿ ಉಳಿಯುತ್ತದೆ ಎನ್ನುವ ನಂಬಿಕೆ ಇಲ್ಲ. ಎಲ್ಲರೂ ಒಂದೊಂದು ಜಿಲ್ಲೆಗೆ ಒಂದೊಂದು ವಿಶ್ವವಿದ್ಯಾನಿಲಯ ಬೇಕು ಎಂದು ಕೇಳುವುದು ಸಹಜ. ಅದಕ್ಕಾಗಿ ಮಾನ್ಯ ಶ್ರೀ ಶಂಕರ್ ರಾವ್‌ರವರ ಮೇಲೆ ಒತ್ತಾಯ ತರುವುದು ಸಹಜ. ಪ್ರತಿಯೊಬ್ಬರು ಸಹ ತಮ್ಮ ತಮ್ಮ ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಬೇಕೆಂದು ಆಗ್ರಹ ಮಾಡುತ್ತಾರೆ. ಆ ರೀತಿಯಾಗಿ ಅನೇಕ ತರಹದ ಬೇಡಿಕೆ ಬರುತ್ತದೆ. ಅದಕ್ಕೆ ನಾನು ಆಗಲೇ ಹೇಳಿದೆ, ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್‌ರವರು ಒಂದು ಖಾಸಗಿ ನಿರ್ಣಯವನ್ನು ತಂದು ಮುಕ್ತವಾಗಿ ಚಿಂತನೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆಂದು ಹಾಗಾದರೆ ವಿಶ್ವವಿದ್ಯಾನಿಲಯವನ್ನು ಕೊಡಬೇಕೇ? ಕೊಡಬಾರದೇ? ಕೊಟ್ಟರೇ ಇನ್ನು ಎಷ್ಟು ವಿಶ್ವ ವಿದ್ಯಾನಿಲಯಗಳನ್ನು ಕೊಡಬಹುದು? ಅದಕ್ಕೆ ಏನಾದರೂ ಒಂದು ಸೀಲಿಂಗ್ ಇದೆಯೇ ? ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರ ಉದ್ದೇಶ ಬೇರೆ ಇದೆ ಅದರ ಬಗ್ಗೆ ನಾನು ಹೇಳುತ್ತಿಲ್ಲ ಅದರ ಬಗ್ಗೆ ಆಮೇಲೆ ಬರುತ್ತೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ನನ್ನ ಪಾಯಿಂಟನ್ನು ಅರ್ಥ ಮಾಡಿಕೊಳ್ಳಲಿಲ್ಲವೆಂದು ಕಾಣುತ್ತದೆ. ಗುಲ್ಬರ್ಗ ಮತ್ತು ಮಂಗಳೂರು ಯೂನಿವರ್ಸಿಟಿಗಳಿಗಿಂತ ಶಿವಮೊಗ್ಗ ಯೂನಿವರ್ಸಿಟಿ ಕಡಿಮೆ ವೆಚ್ಚ ದಲ್ಲಿ ಆಗುತ್ತದೆಂದು ವರದಿಯಲ್ಲಿಯೇ ಹೇಳಿರುವಾಗ ಇದನ್ನು ಮೊದಲು ಮಾಡದೇ ಬಿಟ್ಟು ಬಾಕಿ ಎರಡು ವಿಶ್ವವಿದ್ಯಾನಿಲಯಗಳನ್ನು ಮಾಡಲು ಕಾರಣವೇನು ಎಂದು ನಾನು ಕೇಳುತ್ತಿರುವುದು.

ಶ್ರೀ ಮಳ್ಳೂರು ಆನಂದರಾವ್.—I am going to the basic principle. ಶಿವಮೊಗ್ಗ ವರದಿಯಲ್ಲಿರುವ ಪ್ರಕಾರ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕಾಗಿತ್ತು ಎಂದು ಅವರು ವಾದ ಮಾಡುತ್ತಿದ್ದಾರೆ. ಅದರ ಬಗ್ಗೆ ಖಂಡಿತವಾಗಿಯೂ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಗುಲ್ಬರ್ಗ, ಮಂಗಳೂರಿನಲ್ಲಿ ವಿಶ್ವವಿದ್ಯಾನಿಲಯವನ್ನು ಕೊಡುವಾಗ ಶಿವಮೊಗ್ಗ ಮಾತ್ರ ಏನು ಪಾಪ ಮಾಡಿತ್ತು ಎನ್ನುವುದೊಂದು ಪ್ರಶ್ನೆ, ಬಳ್ಳಾರಿ ಜಿಲ್ಲೆ ಏನು ಪಾಪ ಮಾಡಿದೆ ಎನ್ನುವುದು ಮತ್ತೊಂದು ಪ್ರಶ್ನೆ ಅದು ಹೀಗೆಯೇ ಎಲ್ಲಿಗೆ ಹೋಗಿ ಮುಗಿಯುತ್ತದೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನನ್ನ ಆರ್ಗ್ಯುಮೆಂಟ್‌ನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಬಳ್ಳಾರಿ ಮತ್ತೊಂದು ಜಿಲ್ಲೆಯ ಪ್ರಶ್ನೆ ಇಲ್ಲಿ ಇಲ್ಲ. The report was placed on the Floor of the House. In that report the first place was for Shimoga because the cost of establishment was very low. Then comes Gulbarga and Mangalore. If there is a report to establish a University at Bellary also I have no objection. But the report was only in favour of Shimoga. ಶಿವಮೊಗ್ಗ ಜಿಲ್ಲೆಯ ವಿಶ್ವವಿದ್ಯಾನಿಲಯ ಬೇರೆ ಇತರೇ ಜಿಲ್ಲೆಗಳಿಗಿಂತ ಕಡಿಮೆ ಖರ್ಚಿನಲ್ಲಿ ಆಗುತ್ತದೆಂದು ವರದಿ ಕೊಟ್ಟಿದ್ದರೂ ಸಹ ಏತಕ್ಕೆ ಬಿಟ್ಟು ಹೋಯಿತು ಎಂದು ನನ್ನ ವಾದ. ಇವತ್ತು ಹೊಸ ವಿಶ್ವವಿದ್ಯಾನಿಲಯಗಳನ್ನು ಕೊಡುವ ಬಗ್ಗೆ ಸರ್ಕಾರದವರು ಏನಾದರೂ ಆಳವಾಗಿ ಚಿಂತನೆ ಮಾಡಿದ್ದಾರೆಯೇ, ಇಲ್ಲವೇ ? ಮಾಡಿದ್ದರೆ ಮಾನ್ಯ ಚಂದ್ರಶೇಖರ್‌ರವರು ಹೇಳಿದ ಹಾಗೆ ಶಿವಮೊಗ್ಗದಲ್ಲಿ ಬೇರೆ ಜಿಲ್ಲೆಗಳಿಗಿಂತ ಕಡಿಮೆ ಖರ್ಚಿನಲ್ಲಿ ಆಗುತ್ತದೆಂದು ವರದಿಯಲ್ಲಿ ಹೇಳಿರುವಾಗ ಅಲ್ಲಿಗೆ ಬಿಡುವುದಕ್ಕೆ ಕಾರಣವೇನು? ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಇದನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರವೇನಾದರೂ ಈಗಲಾದರೂ ವಿಚಾರ ಮಾಡುತ್ತಿದೆಯೇ? I am going deeply into the matter. The basic principle for the establishment of a University follow ಮಾಡಿದ್ದಾರೆ. ಈ ಗೊಂದಲ ಬರುತ್ತಲೇ ಇರಲಿಲ್ಲ. ವಿಚಾರ ಮಾಡಿದ್ದೇ ಆಗಿದ್ದರೆ ಮಾನ್ಯ ಶ್ರೀ ಚಂದ್ರಶೇಖರ್‌ರವರು ಈ ರೀತಿಯಾಗಿ ಚಾರ್ಜ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಮತ್ತೆ ಹಿಂದೆ ಅಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ

ಬಗ್ಗೆ ಮಾನ್ಯ ಸಚಿವರು ಭರವಸೆ ಕೊಟ್ಟಿದ್ದರು ಎಂದು ಮಾನ್ಯ ಶ್ರೀ ಚಂದ್ರಶೇಖರ್‌ರವರು ಹೇಳುತ್ತಿದ್ದಾರೆ. ಆದುದರಿಂದ ಸರ್ಕಾರದವರು ಈ ರೀತಿಯಾಗಿ ಹೊಸದಾಗಿ ವಿಶ್ವವಿದ್ಯಾನಿಲಯಗಳನ್ನು ತೆರೆಯುವ ಬಗ್ಗೆ ಒಂದು ಗೈಡ್‌ಲೈನ್ಸ್‌ನ್ನು ಹಾಕಿದ್ದರೆ ಇಂಥಾ ಒಂದು ಗೊಂದಲ ಬರುತ್ತಿರಲಿಲ್ಲ. ಇವತ್ತು ಶಿವಮೊಗ್ಗಕ್ಕೆ ಕೊಡದೇ ಮಂಗಳೂರು, ಗುಲ್ಬರ್ಗಕ್ಕೆ ಏತಕ್ಕೆ ಕೊಟ್ಟರು ಎಂದರೆ. ನಾನು ಮಂಗಳೂರಿನ ಪ್ರತಿಯೊಂದು ತಾಲ್ಲೂಕು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿದ್ದೇನೆ ಅಲ್ಲೆಲ್ಲಾ ಬೃಹತ್ ಇನ್‌ಸ್ಟಿಟ್ಯೂಷನ್‌ಗಳಿವೆ, ಸಾಕಷ್ಟು ಕಾಲೇಜ್‌ಗಳಿವೆ. ಅದೇ ರೀತಿ ಗುಲ್ಬರ್ಗದಲ್ಲಿ ಸಹ ಸಾಕಷ್ಟು ಕಾಲೇಜ್‌ಗಳಿವೆ. ಹಾಗಾದರೆ ಅಲ್ಲೆಲ್ಲಾ ಸಾಕಷ್ಟು ಕಾಲೇಜ್‌ಗಳಿವೆ, ಇನ್‌ಸ್ಟಿಟ್ಯೂಷನ್‌ಗಳಿವೆ ಆದುದರಿಂದ ಅಲ್ಲಿಗೆ ತಾವು ಪ್ರಾಮುಖ್ಯತೆ ಕೊಡುತ್ತೇವೆಂದು ಹೇಳುವುದಾದರೆ, ಇದೇ ಒಂದು ಕ್ರೈಟೀರಿಯಾ ಆಗಿರಬೇಕೇ? ಇಲ್ಲ ಬೇರೆ ಇನ್ನು ಯಾವ ಕ್ರೈಟೀರಿಯಾ ಇರಬೇಕು? ಇವತ್ತು ೬ನೇ ವಿಶ್ವವಿದ್ಯಾನಿಲಯವಲ್ಲ ೧೦ನೇ ವಿಶ್ವವಿದ್ಯಾನಿಲಯವನ್ನು ಏತಕ್ಕೆ ಕೊಡಬಾರದು ಎಂದು ನನ್ನ ಪ್ರಶ್ನೆ.

೧೧-೩೦ ಎ. ಎಂ.

ಅಧ್ಯಕ್ಷರೇ, ಇವೊತ್ತು ಬೆಂಗಳೂರು, ಮೈಸೂರು, ಕರ್ನಾಟಕ ಈ ಮೂರು ವಿಶ್ವವಿದ್ಯಾನಿಲಯಗಳು ಪ್ರಧಾನವಾದವು. ಈಗ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಹೊಸದಾಗಿ ಸ್ಥಾಪಿತವಾಗಿವೆ. ಅವುಗಳ ಕಾರ್ಯದ ಬಗ್ಗೆ ಈಗಾಗಲೇ ಮಾತನಾಡಲಿಕ್ಕೆ ಆಗುವುದಿಲ್ಲ. ಮೊದಲು ಮೂರು ವಿಶ್ವವಿದ್ಯಾಲಯಗಳು ಸ್ಥಾಪನೆಯಿಂದ ಇತ್ತೀಚಿನ ದಿನಗಳವರೆಗೂ ಕಾರ್ಯ ಮಾಡಿಕೊಂಡು ಬಂದಿರತಕ್ಕ ರೀತಿಯನ್ನು ಒಳಗೆ ಮತ್ತು ಹೊರಗೆ ಹೊಕ್ಕು ನೋಡಿದರೆ ವಿಶ್ವವಿದ್ಯಾನಿಲಯಗಳು ವಹಿಸಬೇಕಾದಂಥ ಪಾತ್ರದ ಬಗ್ಗೆ ಪುನರ್ ಚಿಂತನೆ ಅಗತ್ಯ ಎನಿಸುತ್ತದೆ. ಇವೊತ್ತು ವಿಶ್ವವಿದ್ಯಾನಿಲಯಗಳು ಏನು ಮಾಡುತ್ತಿವೆ, ಏನು ಮಾಡಬೇಕು. ಅದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ನಾನು ಬೆಂಗಳೂರು ಯುನಿವರ್ಸಿಟಿ ಸೆನೆಟ್‌ನಲ್ಲಿ ಎರಡು ಟರ್ಮ್ ಮೆಂಬರ್ ಆಗಿದ್ದೆ. ಅದು ಒಂದು ಅಕಾಡಮಿಕ್ ಅಥಾರಿಟೀಸ್ ಆಗುವ ಬದಲು ಅಡ್ಮಿನಿಸ್ಟ್ರೇಟೀವ್ ಆಫೀಸ್‌ಗಳು ಆಗಿಬಿಟ್ಟಿದ್ದೆ. ಸೆನೆಟ್ ಮತ್ತು ಸಿಂಡಿಕೇಟ್ ಮೀಟಿಂಗ್‌ನಲ್ಲಿ ಏನು ಚರ್ಚೆ ನಡೆಯುತ್ತದೆ ಎಂದರೆ ಯಾವ ಬಿಲ್ಡಿಂಗ್ ಎಲ್ಲಿ ಕಟ್ಟಬೇಕು ....

CHAIRMAN.— May I draw your attention ? The particular question is, whether we should have another University at Shimoga. But, you are making a case for future Universities. So, I request you to confine youself as far as that point is concerned.

ಶ್ರೀ ಮಳ್ಳೂರು ಆನಂದರಾವ್ .— ಅಧ್ಯಕ್ಷರೇ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮುಂದೆ ವಿಶ್ವವಿದ್ಯಾನಿಲಯಗಳನ್ನು ಕೊಡಬೇಕೇ, ವಿಶ್ವವಿದ್ಯಾನಿಲಯಗಳು ನಮ್ಮ ಸಮಾಜದಲ್ಲಿ ಯಾವ ಪಾತ್ರವಹಿಸಿವೆ ಎನ್ನುವುದನ್ನು ನಿಶ್ಚಯ ಮಾಡಿಕೊಂಡರೆ ಮುಂದೆ ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಇದೆಯೋ ಇಲ್ಲವೇ ಅದರ ತೀರ್ಮಾನಕ್ಕೆ ಬರಬಹುದು. ಇದರ ಬಗ್ಗೆ ನಾನು ವಿಶ್ಲೇಷಣೆ ಮಾಡಿ ನಾನು ಒಂದು ಗಂಟೆ ಹೇಳಬಲ್ಲೆ. ಆದರೆ ಈಗ ಇರತಕ್ಕ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳು ಅಕಾಡಮಿಕ್ ಅಥಾರಿಟೀಸ್ ಆಗಿಲ್ಲ.

CHAIRMAN .— I want you to stick to only Shimoga University. But, you are generalising the issue. Now, what the hon. Member S. M. Chandrashekar has drawn is, whether an University has been promised and what is the position, but not about future universities and other things.

ಶ್ರೀ ಮಳ್ಳೂರು ಆನಂದರಾವ್ .— ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರಾದ ಶ್ರೀರನಾಳಿ ಚಂದ್ರಶೇಖರ್ ಅವರು ಹೇಳಿದ ಪಾಯಿಂಟಿಗೆ ಬರುತ್ತೇನೆ. ಮೊದಲೇ ನಾವು ಯಾವುದೇ ವಿಶ್ವವಿದ್ಯಾನಿಲಯ ಕೊಡುವುದಿಲ್ಲ ಎಂದು ಹೇಳಿದ್ದರೆ ಮಾನ್ಯ ಸದಸ್ಯರ ಬೇಸಿಕ್ ಪಾಯಿಂಟ್ ಹೊರಟು ಹೋಗುತ್ತಿತ್ತು. ಇವೊತ್ತು ಶಿವಮೊಗ್ಗಕ್ಕೆ ಒಂದು ವಿಶ್ವವಿದ್ಯಾನಿಲಯ ಕೊಟ್ಟರೆ, ನಾಳೆ ಬಳ್ಳಾರಿಗೆ ಏತಕ್ಕೆ ಕೊಡಬಾರದು ಎನ್ನುವ ಪ್ರಶ್ನೆ ಬರುತ್ತದೆ. ಇದನ್ನು ಕೇವಲ ಅಡ್ಮಿನಿಸ್ಟ್ರೇಟೀವ್ ಆಫೀಸ್‌ಗಳನ್ನು ಮಾಡುವುದಾದರೆ

ಮೈಸೂರು ಯೂನಿವರ್ಸಿಟಿಯಲ್ಲಿ ಇಂತಿಷ್ಟು ಕಾಲೇಜುಗಳು ಜಾಸ್ತಿಯಾಗಿವೆ ಆಡ್ಮಿನಿಸ್ಟ್ರೇಷನ್ ನೋಡಲಿಕ್ಕೆ ಒಂದು ಯೂನಿವರ್ಸಿಟಿ ಬೇಕು ಎಂದು ಆಡ್ಮಿನಿಸ್ಟ್ರೇಷನ್ ನೋಡಲಿಕ್ಕೆ ಒಂದು ಕ್ರೈಟೀರಿಯಾ, ಸರ್ಟಿಫಿಕೇಟ್ ಕೊಡುವುದು ಒಂದು ಕ್ರೈಟೀರಿಯಾ ಆದರೆ ಒಂದೊಂದು ಜಿಲ್ಲೆಗೂ ಕೊಡಬೇಕಾಗುತ್ತದೆ. ಶಿಕ್ಷಣ ಸಂಸ್ಥೆಗಳು ಇವೊತ್ತು ಹೆಚ್ಚು ಹೆಚ್ಚು ಬೆಳೆಯುತ್ತಿವೆ. ನಾವು ಓದುತ್ತಿದ್ದಾಗ ಒಂದೊಂದು ತಾಲೂಕಿಗೆ ಒಂದೊಂದು ಹೈಸ್ಕೂಲು ಇರಲಿಲ್ಲ. ಈಗ ಹೋಬಳಿ ಸೆಂಟರ್‌ನಲ್ಲಿ ಜೂನಿಯರ್ ಕಾಲೇಜುಗಳು ಬಂದಿವೆ. ಇದು ಬೆಳವಣಿಗೆ ಪೂರ್ಣವಾಗಿ ಬೆಳೆಯುತ್ತಿದೆ. ಇವೊತ್ತು ಶಿಕ್ಷಣ ಸಂಸ್ಥೆಗಳು ಹೆಚ್ಚು ಹೆಚ್ಚು ಬೆಳೆದ ಹಾಗೆಲ್ಲಾ ಒಂದೊಂದು ಯೂನಿವರ್ಸಿಟಿ ಸ್ಥಾಪನೆ ಮಾಡಬೇಕೆಂಬ ನಿರ್ಣಯಕ್ಕೆ ಬಂದರೆ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಯೂನಿವರ್ಸಿಟಿ ಕೊಡಬೇಕಾಗುತ್ತದೆ. ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಬೆಳೆದರೆ ಒಂದೊಂದು ಜಿಲ್ಲೆಗೆ ಎರಡು ಮೂರು ಯೂನಿವರ್ಸಿಟಿಗಳನ್ನು ಕೊಡಬೇಕಾಗುತ್ತದೆ. ಇವೊತ್ತು ಸುಪ್ರಿಮ್ ಅಕಾಡಮಿಕ್ ಬಾಡೀಸ್ ಮಾಡಬೇಕು. ಈಗ ಸರ್ಕಾರದ ಚಿಂತನೆಗೆ ಅವಕಾಶ ಮಾಡಿಕೊಡುತ್ತಿಗೆ. ವಿಶ್ವವಿದ್ಯಾನಿಲಯಗಳು ಈ ರೀತಿ ಒಂದು ವ್ಯಾಪಕವಾಗಿ ಬೆಳೆದು ಶಿಕ್ಷಣ ಜನಸಾಮಾನ್ಯರಿಗೆ ಮುಟ್ಟುವ ಹಾಗೆ ಆಗಬೇಕು. ಸಮಾಜದಲ್ಲಿ ಸಾಮಾಜಿಕ ಬದಲಾವಣೆ ತರಲಿಕ್ಕೆ, ಶೈಕ್ಷಣಿಕ ಪ್ರಗತಿಯನ್ನು ರಾಜ್ಯದಲ್ಲಿ ಸಾಧನೆ ಮಾಡಲಿಕ್ಕೆ ಅದರಲ್ಲಿ ಪ್ರಧಾನ ಪಾತ್ರವನ್ನು ವಿಶ್ವವಿದ್ಯಾನಿಲಯಗಳು ವಹಿಸಬೇಕು ಎಂದರೆ ಈಗ ವಹಿಸಬೇಕಾಗಿರುವ ಪಾತ್ರ ಭಿನ್ನವಾಗುತ್ತಿದೆ. ನಿಜವಾಗಿಯೂ ಎಷ್ಟು ಯೂನಿವರ್ಸಿಟಿಗಳು ಬೇಕು ಎನ್ನುವುದನ್ನು ನಿಶ್ಚಯ ಮಾಡಬೇಕಾಗಿದೆ. ಸಮಾಜದಲ್ಲಿ ಸೋಷಿಯಲ್ ಚೇಂಜ್ ಬರಬೇಕು ಎಂದು ಹೇಳುತ್ತಿದ್ದೇನೆ. ವಿದ್ಯಾ ಪ್ರಗತಿ ಆಗಬೇಕು ಎಂದು ಹೇಳುತ್ತೇವೆ. ನ್ಯೂ ಕಾನ್‌ಸೆಪ್ಟ್ ಆಫ್ ಎಜುಕೇಷನ್ ಅಂಡ್ ನಾನ್ ಫಾರಮಲ್ ಸಿಸ್ಟಮ್ ಆಫ್ ಎಜುಕೇಷನ್ ಬರುತ್ತಿದೆ. ನೇರವಾಗಿ ಎಂ. ಎ. ಪರೀಕ್ಷೆಗಳಿಗೆ ಕುಳಿತುಕೊಳ್ಳಬಹುದು. ಮೊನ್ನೆ ಕೆ. ಹೆಚ್. ಪಾಟೀಲ್ ಅವರು ಎಂ. ಎ. ಪರೀಕ್ಷೆಗೆ ಕುಳಿತ್ತಿದ್ದರು. ಎಂ. ಎ. ಪರೀಕ್ಷೆಗೆ ಕುಳಿತು ಕೊಳ್ಳಬೇಕಾಗಿದ್ದರೆ, ಬಿ. ಎ. ಪರೀಕ್ಷೆಯನ್ನು ಪಾಸ್ ಮಾಡಬೇಕಾಗಿಲ್ಲ. ಇವೊತ್ತು ೧೮ ವರ್ಷಕ್ಕೆ ಮೇಲ್ಪಟ್ಟು ಆಗಿದ್ದರೆ ಸಾಕು ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳಬಹುದು. ಶಿಕ್ಷಣದಲ್ಲಿ ವ್ಯಾಪಕವಾಗಿ ಏನು ಬದಲಾವಣೆ ಬರುತ್ತಿದೆ ಅದನ್ನು ಗುರುತಿಸಬೇಕಾಗುತ್ತದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವೊತ್ತು ಯಾರೂ ಪ್ರೈಮರಿ ಶಾಲೆಗೆ ಹೋಗಬೇಕಾದ ಅಗತ್ಯವಿಲ್ಲ. ೧೮ ವರ್ಷಕ್ಕೆ ಮೇಲ್ಪಟ್ಟ ಆದರೆ ಅವರು ನೇರವಾಗಿ ಮೆಟ್ರಿಕ್ ಪರೀಕ್ಷೆಗೆ ಕೂರಬಹುದು ಪರೀಕ್ಷೆಗೆ ಹೋಗಿ ಶ್ರೀರಾಮ, ಶ್ರೀರಾಮ, ಶ್ರೀರಾಮ ಎಂದು ಬರೆದುಬಂದರೆಸಾಕು,ಅವರು ಸರಿಯಾಗಿ ಅವರ ರಿಜಿಸ್ಟರ್‌ನಂಬರ್ ಬರೆದುಬಂದರೆಸಾಕು ಅವನಿಗೆ ಎಸ್. ಎಸ್. ಎಲ್. ಸಿ. ಫೈಲ್ ಎಂದು ಸರ್ಟಿಫಿಟ್ ಬರುತ್ತದೆ. ಅವನಿಗ ೩೫ವರ್ಷಕ್ಕೆ ಮೇಲ್ಪಟ್ಟು ಆಗಿದ್ದರೆ ಅವನು ನೇರವಾಗಿ ಎಂ. ಎ. ಪರೀಕ್ಷೆಗೆ ಕುಳಿತುಕೊಳ್ಳಬಹುದು. ಅವನು ಎಮ್ಮೆ ಮೇಯಿಸುತ್ತಿದ್ದರೂ ಪರವಾಗಿಲ್ಲ, ಎಂ. ಎ. ಪರೀಕ್ಷೆಗೆ ಕುಳಿತುಕೊಳ್ಳಬಹುದು. ಅವನಿಗೆ ಎಂ. ಎ. ಫೈಲ್ ಎಂದು ಅನಂತರ ಸರ್ಟಿಫಿಕೇಟ್ ಬರುತ್ತದೆ. ನಾನು ಈ ಪದ್ಧತಿ ತಪ್ಪು ಎಂದು ಹೇಳುತ್ತಿಲ್ಲ. ಸಮಾಜದಲ್ಲಿ ಶಿಕ್ಷಣ ಬೆಳೆಯುತ್ತಿರುವಾಗ ವಿಶ್ವವಿದ್ಯಾನಿಲಯಗಳು ಹೆಚ್ಚು ಆಗಬೇಕಾಗುತ್ತದೆ. ಹಾಗೆ ಹೇಳುವಾಗ ಶಿವಮೊಗ್ಗಕ್ಕೆ ವಿಶ್ವವಿದ್ಯಾಲಯ ಬೇಕೆ ಅಥವಾ ಬೇಡವೆ ಪ್ರಶ್ನೆ ಬರುತ್ತದೆ. ಈಗ ಗುಲ್ಬರ್ಗಕ್ಕೆ. ಮಂಗಳೂರಿಗೆ ವಿಶ್ವವಿದ್ಯಾಲಯ ಕೊಟ್ಟ ಕ್ರೈಟೀರಿಯಾ ಏನು ಎಂದು ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಆಡ್ಮಿನಿಸ್ಟ್ರೇಟೀವ್ ಕ್ರೈಟೀರಿಯಾ ಎಂದು ಹೇಳಿದರೆ ಒಂದೊಂದು ಜಿಲ್ಲೆಗೂ ಕೊಡಬೇಕಾಗುತ್ತದೆ. ವ್ಯಾಪಕವಾಗಿ ಸೋಷಿಯಲ್ ಚೇಂಜ್ ಬರಬೇಕು. ಒಂದು ಅಥಾರಿಟಿ ಆಗಬೇಕು ಎಂದು ಸರ್ಕಾರಕ್ಕೆ ಕಲ್ಪನೆ ಇದ್ದರೆ ಜಿಲ್ಲೆಗೆ ಒಂದೊಂದು ಏತಕ್ಕೆ ಬೇಕು ? ಇದರ ಬಗ್ಗೆ ಚಿಂತನೆ ಅಗತ್ಯ ಇದೆ. ಈ ದೃಷ್ಟಿಯಿಂದ ಈ ಬೇಸಿಕ್ ಇಶ್ಯು ಯಾವುದು ಇದೆ ಅದರ ಬಗ್ಗೆ ತಜ್ಞರ ಸಮಿತಿ ನೇಮಕ ಮಾಡಿ ಇದರ ಬಗ್ಗೆ ವಿಶ್ವವಿದ್ಯಾಲಯಗಳ ಪಾತ್ರ ಏನು ? ಬದಲಾವಣೆಯಾಗುತ್ತಿರುವ ಸಮಾಜದಲ್ಲಿ ವಿಶ್ವವಿದ್ಯಾಲಯಗಳು ಯಾವ ರೀತಿ ಪಾತ್ರ ವಹಿಸಬೇಕು ? ಪ್ರತಿಯೊಂದು ಜಿಲ್ಲೆಗೂ ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆಯೇ ? ಇದನ್ನು ತಜ್ಞರ ಸಮಿತಿ ಪರಿಶೀಲಿಸಬೇಕಾಗುತ್ತದೆ. ಇದನ್ನು ನಾವು ನೀವು ಮಾಡಲಿಕ್ಕೆ ಆಗುವುದಿಲ್ಲ. ಇದು ಇದರ ಹಿಂದುಗಡೆ ಇರತಕ್ಕ ಚಿಂತನೆ ಎಂದು ನಾನು ಭಾವಿಸುತ್ತೇನೆ. ನಾಳೆ ಮಾನ್ಯ ಸದಸ್ಯರಾದ ಆರ್ಮುಗಂ ಅವರು ನಮಗೂ ಒಂದು ವಿಶ್ವವಿದ್ಯಾಲಯ ಬೇಕು ಎಂದು ಕೇಳಬಹುದು.

ಶ್ರೀ ಸಿ. ಎಂ. ಆರ್ಮುಗಂ .— ನಾನು ಕೇಳುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್ .—ಅಧ್ಯಕ್ಷರೇ, ನಾನು ಮಾನ್ಯ ಸದ್ಯಸರಾದ ಶೀರನಾಳಿ ಚಂದ್ರ ಶೇಖರ್ ಅವರು ತಂದಿರತಕ್ಕ ರೆಸಲ್ಯೂಷನ್ ಏನಿದೆ ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಅದಕ್ಕೆ ಕಾರಣ ಏನು ಎಂದರೆ ಇವೊತ್ತು ಯಾವ ಕ್ರೈಟೀರಿಯಾ ಮೇಲೆ ಗುಲ್ಬರ್ಗ ಮತ್ತು ಮಂಗಳೂರಿಗೆ ಕೊಟ್ಟಿದ್ದೀರಾ ಅದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕಾಗುತ್ತದೆ. ಇದರ ಬಗ್ಗೆ ಒಂದು ತಜ್ಞರ. ಸಮಿತಿ ನೇಮಕ ಮಾಡುವುದು ಒಳ್ಳೆಯದು ಇಲ್ಲದೇ ಇದ್ದರೆ, ಗೊಂದಲಕ್ಕೆ ಎಡೆಮಾಡಿಕೊಡುತ್ತದೆ ಇವೊತ್ತು ಪ್ರಬಲವಾದ ರಾಜಕೀಯ ಪಟುಗಳು ಮಂತ್ರಿಗಳು ಇರುವ ಕಡೆಗೆ ವಿಶ್ವವಿದ್ಯಾಲಯಗಳನ್ನು ಕೊಡುವುದಾದರೆ ಅದಗ ಕಡೆ ಒಂದು ದಿಕ್‌ಸೂಚಿ ಹಾಕಬೇಕಾಗುತ್ತದೆ. ಈಗ ಮಂಗಳೂರು, ಗುಲ್ಬರ್ಗಕ್ಕೆ ಯಾವ ಕ್ರೈಟೀರಿಯವಾದ ಮೇಲೆ ಕೊಟ್ಟಿದ್ದೀರಾ ? ಈಗ ಮಂಗಳೂರು, ಗುಲ್ಬರ್ಗಕ್ಕೆ ಕೊಟ್ಟಿರುವ ಕ್ರೈಟೀರಿಯಾ ತೆಗೆದುಕೊಂಡರೆ ಮೊದಲನೇ ಕ್ಲೈಮ್ ಶಿವಮೊಗ್ಗದ್ದು ಬರುತ್ತದೆ ಅದರ ಬಗ್ಗೆ ಸರ್ಕಾರ ಗಮನಹರಿಸಿ ಯೂನಿವರ್ಸಿಟಿ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಇಗಿರತಕ್ಕ ಅಳತೆಗೋಲಿನಿಂದ ಅಳೆದರೆ ಶಿವಮೊಗ್ಗ ಯೂನಿವರ್ಸಿಟಿ ಕೊಡುವುದು ಅತ್ಯಗತ್ಯವಿದೆ. ಇದು ಆರನೇ ಯೂನಿವರ್ಸಿಟಿ. ಅಡ್ಮಿನಿಸ್ಟ್ರೇಷನ್ ಮೇಜರ್ ಫ್ಯಾಕ್ಟ್, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ ಚಿತ್ರ ದುರ್ಗವನ್ನು ಮೈಸೂರು ಯೂನಿವರ್ಸಿಟಿಗೆ ಸೇರಿಸಿದ್ದಾರೆ. ಶಿವಮೊಗ್ಗಕ್ಕೆ ಪಕ್ಕದ ಜಿಲ್ಲೆಯನ್ನು ಸೇರಿಸಬಹುದು. ತಾವು ಇಚ್ಛೆಪಟ್ಟರೆ ಹಾಸನವನ್ನು ಸೇರಿಸಬಹುದು. ಈ ರೀತಿ ಶಿವಮೊಗ್ಗಕ್ಕೂ ಒಂದು ಯೂನಿವರ್ಸಿಟಿಯನ್ನು ಕೊಡುವುದರಲ್ಲಿ ತಪ್ಪೇನೂ ಇಲ್ಲ, ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಕ್ರೈಟೀರಿಯ ಬದಲಾವಣೆಮಾಡಿ, ಚಿಂತನೆಮಾಡಿ. ಗುಲ್ಬರ್ಗವನ್ನು ಕಿತ್ತು ಹಾಕಿ, ಅದನ್ನು ಕಿತ್ತು ಹಾಕುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ, ಶಿವಮೊಗ್ಗಕ್ಕೆ ಯೂನಿವರ್ಸಿಟಿ ಕೊಡಿ, ಶಿವಮೊಗ್ಗಕ್ಕೆ ಕೊಟ್ಟು ಕೊನೇ ಮಾಡಿಬಿಡಿ. ನನ್ನ ವೈಯಕ್ತಿಕವಾದ ಅಭಿಪ್ರಾಯ ಕೇಳಿದರೆ ಹೆಚ್ಚಿನ ಯೂನಿವರ್ಸಿಟಿಗಳು ಅನಗತ್ಯ. ನಾವು ಕೊಡುವ ದುಡ್ಡೆಲ್ಲಾ ಬರೀ ಅಡ್ಮಿನಿಸ್ಟ್ರೇಷನ್‌ಗೆ ಹೋಗುತ್ತದೆ. ಸೆನೆಟ್, ಸಿಂಡಿಕೇಟ್, ಅಡ್ಮಿನಿಸ್ಟ್ರೇಷನ್‌ಗೆ ಬಹಳಷ್ಟು ದುಡ್ಡು ಖರ್ಚಾಗುತ್ತದೆ. ಬರೀ ಅಡ್ಮಿನಿಸ್ಟ್ರೇಷನ್‌ಗೆ ಆಗುತ್ತದೆಯೇ ಹೊರತು ಅಕಡೆಮಿಕ್ ಸೈಡ್ ಏನೂ ನಡೆಯುವುದಿಲ್ಲ. ಒಂದೊಂದು ಯೂನಿವರ್ಸಿಟಿಯಲ್ಲೂ ಒಂದೊಂದು ಗುಂಪಿನ ರಾಜಕೀಯ ನಡೆಯುತ್ತಾ ಇರುತ್ತದೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಈಗ ನಾನು ಹೇಳುವುದೇನೆಂದರೆ, ಶಿವಮೊಗ್ಗಕ್ಕೆ ಒಂದು ಯೂನಿವರ್ಸಿಟಿಯನ್ನು ಕೊಟ್ಟುಬಿಡಿ, ಇನ್ನು ಹೆಚ್ಚಿಗೆ ಕೊಡಬೇಡಿ. ಈಗಾಗಲೇ ಮಂಗಳೂರು ಮತ್ತು ಗುಲ್ಬರ್ಗಕ್ಕೆ ಎರಡು ಯೂನಿವರ್ಸಿಟಿಗಳನ್ನು ಕೊಟ್ಟು ಬಿಟ್ಟಿದ್ದೀರಿ. ರಿಪೋರ್ಟ್‌ನಲ್ಲಿ ಶಿಫಾರಸು ಮಾಡಿರುವುದರಿಂದ ಶಿವಮೊಗ್ಗಕ್ಕೆ ಬೈಪಾಸ್‌ಮಾಡಿ ಕಮಿಟ್‌ಮಾಡಿದ್ದೀರಿ ಶಿವಮೊಗ್ಗಕ್ಕೆ ಯೂನಿವರ್ಸಿಟಿ ಕೊಟ್ಟುಬಿಡಿ. I request the Government to please redefine the role of Universities, otherwise, it is a sheer waste of money. ಬರೀ ಅಡ್ಮಿನಿಸ್ಟ್ರೇಷನ್‌ಗೆ ಹಣ ಖರ್ಚಾಗುತ್ತದೆ. ಇನ್ನೊಂದು ರಾಜಕೀಯ ಕೇಂದ್ರವನ್ನು ಸೃಷ್ಟನೆ ಮಾಡಿದಹಾಗೆ ಆಗುತ್ತದೆ. ಇದಕ್ಕೆ ಕೊನೆ ಮಾಡಿಬಿಡಿ, ೩ ಕೋಟಿ ಜನಕ್ಕೆ ೬ ಯೂನಿವರ್ಸಿಟಿಗಳು ಸಾಕು. ಶಿವಮೊಗ್ಗಕ್ಕೆ ಯೂನಿವರ್ಸಿಟಿ ಕೊಟ್ಟು, ಮುಕ್ತಾಯ ಮಾಡಿ ಎಂದು ಹೇಳುತ್ತೇನೆ. Lastly my humble submission to the Government is to redefine the role of Universities.

Thank you Sir.

SRI C M. ARUMUGHAM (KGF).—Sir, I support the resolution. To day, in our country there are about 180 Universities out of which seven are Central Universities. The Karnataka State does not have Central University. Bihar has got 18 Universities, Madhya Pradesh-10, Uttara Pradesh-12 and West Bengal-7. Therefore, the demand for establishing University at Shimoga is perfectly correct. I would appeal to the Government to thing of establishing a Central University at Shimoga. It is necessary to have a Central University in Karnataka.

Coming to the point of literacy, our State stands 18th as per the latest census report. Though Uttara Pradesh has got 12 Universities, its rank in literacy is 25th. The overall percentage of literacy of the Karnataka State is 38.41. The Kerala State stands first in literacy with 69%. Sir, Mizoram, Lakshdweep and Pondicherry are above us so far as the percentage of literacy is concerned. Of course, there has been an increase in the percentage of literacy. but still more than 50% of our male population are illiterate. It has been recorded that 70% of our female population are still illiterate. Therefore, to increase the percentage of literacy of our State, we should have more and more Primary schools Middle schools and colleges too. To-day, we have got Bangalore University, Mysore University, Karnataka University, Mangalore Univerity and Gulbarga University. The University colleges are increasing and the Government is sanctioning. Last year, the Government has sanctioned so many colleges in our State. Now, how to administer these colleges is the point. As rightly mentioned by the hon. Member Sri Mallur Anandrao, we need experts for conducting examinations, preparing questions, evaluating answer papers e c. etc. Therefore, in order to have proper control over these colleges, the Government has sanctioned during the last year two Universities, one at Mangalore and another at Gulbarga. The Mangalore University has got at present 219 acres of land and this year. they are going to acquire still 5 acres of land. I do not know, how many acres of land the Gulbarga University has.

SRI SHERKHAN.—The Gulbarga University has got 1000 acres of land.

SRI C. M. ARUMUGHAM.—I do not have exact information. Anyway, in respect of Shimoga, they have got 400 acres of land and they are going to acquire additional 400 acres of land. Therefore, in order to establish University at Shimoga, as for as the question of land is concerned, they have got. The Gulbarga University has received only Rs. 37 lakhs from the State Government during last year, in addition a sum of Rs. 2.65 lakhs towards affiliation fees etc. The Mangalore University received Rs. 40 lakhs or so. I do not think that it will be much for the Government to spend Rs. 40 lakhs.

Last year the Minister of Education was from Mangalore and we got so many institutions for Mangalore. Similarly, now the Finance Minister is from Mangalore and he wants everything to come up in Mangalore. So, whoever contests from Mangalore, he will be elected.

Sri G. B. Shankara Rao.—The infrastructure of Gulbarga has also been built up. For a Post-Graduate centre only, the amount was spent. The amount was not spent in Mangalore and so it requires central assistance.

Sri C. M. Arumugham.—So, I was saying that this Mangalore University has got 219 acres of land. In Shimoga they have set apart 800 Acres.

Sri G. B. Shankara Rao.—Land is not the only criteria.

Sri C. M. Arumugham.—What are you talking ? How can you construct a University in five acres. ? Land is one of the main points. Shimoga has got 800 acres of land. Special buildings have been proposed in the Master-plan of the Campus where series of buildings, administrative buildings, Staff quarters, Office quartesr, Vice-Chancellor's quarters, hospital, shopping centres will come up. This construction costs about Rs. 4 crores. Because the Finance Minister has come from Mangalore, you have set apart Rs.4 crores and you will have to accept it. You will not give one paisa for other institutions When you are giving Rs. 4 crores for Mangalore. you should also give funds to Shimoga to start a University. You know today which section of the society controls the Universities in Karnataka. Who controlled the Mysore University all these years? Mysore University was established 65 years ago. It is the oldest University in the country. Everyone knows that one particular community dominates over the Mysore University. Similarly, we know as to who controls Karnataka and Bangalore Universities. Therefore, the question of domination does not come because the Universities have already been dominated by some other section of the society. If somebody wants to dominate in Shimoga, you must give preference. In Shimoga 37 colleges have been established. If you start a University, it will help conducting examinations. Many colleges are coming up and conducting examinations, making 15,000 to 20,000 students to sit for examination in one University will be difficult. As you know the results of the S.S.L.C., are poor and only 35% of the candidates have passed. Sir, I would quote an example. In America, all appointments of Professors, Readers, Lecturers are temporary. Every year it will be reviewed. Their appointments depend upon the results of the examination. After the results are announced, the students assess the performance of the Professors, Readers and Lecturers.

Sri G.B. Shankara Rao —This is not America.

Sri C.M. Arumugham.—I never said like that. Otherwise, please give me an opportunity to go to America and address the Senate there, than addressing here.

SRI B. BASAVALINGAPPA —The Hon'ble Member made out a point that he would like to address the Senate in America than the Assembly. This Assembly is also one of the best forums to address.

SRI C M. ARUMUGHAM.—I would like to give an example for the information of the Hon'ble Minister for Education. If you sit in train and go to Madras from Bangalore by the time the train reaches Madras, two drivers will be changed But you will not know the change. Likewise, for the lost 30 years the Government is going with the same speed, going through the same route. The present Education Minister is a good Sanskrit Pandit. But what is that he has improved? Sri Venkatappa was the Minister for Education but he had not seen the floor of the college. What is the difference between Sri Venkatappa and yourself. You are following the same route, same speed. You are only reading 'Prajavani' and 'Samyuktha Karnataka' You must also read Hindu, Blitz, Times of India, Indian Express and improve your knowledge. Mere reading one type of paper published from Bombay Karnataka.

SRI G.B. SHANKAR RAO.—How do you say that I do not read them? I am reading all of them.

† SRI C. M. ARUMUGHAM.—You must also get the de ates from America, Canada, United Kingdom, France and read them. As a Minister of Education, you must read, read and improve. You may bring Secretary, Commissioners and Director and all. But there is no improvement and they cannot improve it. Kindly apply your mind. As I was saying every appointment in America of Professors, Readers, Lecturers is temporary. They must be ready to quit if their performance is not upto the mark. In our State, the result is extremly poor but still you have got staff. How to improve our institutions ? One of the methods is to have one more University, to have a strict control.

12-00 NOON

SRI G. B. SHANKAR RAO.—Will it solve ?

SRI C. M. ARUMUGHAM.—Therefore, what I am trying to say is to improve the examinations, you appoint Lecturers Professors, seniors persons and change the very infrastructure of the Department so that we will have an improved percentage. We can improve the percentage from 30/40 to 55, 65, 75 and 80. There are students who get 95% marks. How is it ? Some get 35% only. The College Education must also be useful for a student. If a candidate passes M. A. or M.Sc, he will not get any appointment. When you spend so much of money for these courses, you must have effective examina

tion and effective checking/corrections. For that it is necessary, as I have said, to have one more University in the State Whether you sanction to Kolar or not asking for Kolar. We may get a University provided Sri Anandrao becomes Minister for Education. Whether that possibility is there. I cannot say. Anything may happen. But when he become. probably because of his affection for his District though he has permanently settled in Bangalore. he may give one University or initiate one. That is some time after ; not now But I am only questioning the hon. Minister, when the Report says that preference should be given to Shimoga, why he has not included it ? What politics it is played ? What is the role that is played by the Government.

SRI G. B. SHANKAR RAO.—No politics is there.

SRI C. M. ARUMUGHAM.—If there is no politics this University should have gone to Shimoga. There is a Report given by experts. They have studied all the aspects and recommended that first preference should be given to Shimoga, I would ask the hon. Education Minister, what is the reason ? Why you have not given ? Gulbarga. you have already given. And then Mangalore. Is it because of the Finance Minister ? If he will say, you will have to agree, Otherwise you will not get anything from him or he may prune your Department. You are afraid of it. Therefore. give a University ! The Report says Shimoga should be given top priority. Either you must accept the Expert opinion or do not appoint such committees. You take decisions as you have taken in respect of so many Colleges. Junior Colleges, High Schools etc. The Private Secretary will bring the file. The Minister will ask what is it. The Private Secretary will say it is such and such thing. Then the Minister will ask for pen and sign it then and there only.

SRI G. B. SHANKAR RAO.—But I do not do that.

MR. DEPUTY SPEAKER.—Well and good.

SRI C. M. ARUMUGHAM.—The Minister will never say 'no'. Hundreds of people will be in this Chamber. He is a good man. He speaks nicely. The Private Secretary brings the file and he will ask what is it. The Private Secretary says that it is a High School and he signs it

SRI G. B SHANKAR RAO.--It is a grave charge against me. I go through the entire noting on the file and only when I am convinced I put my signature. Not at the very instance of the Private Secretary. Sometimes the hon. member prevails upon me and wants me to do the work according to his decisions. But I do not do that also. Sometimes he gets wild with me also.

SRI C. M. ARUMUGHAM.--I am saying because he did like that.

SRI G. B. SHANKAR RAO.--Please do not repeat that. I have made it clear.

SRI C. M. ARUMUGHAM.--Allright.

SRI G. B. SHANKAR RAO.--Mr. D puty Sp aker Sir, this is an aspersion against a senior colleague. He knows me, he knows my depth of understanding. In such a case it is a very serious charge that my friend is making. H s ould take it back.

SRI C. M. ARUMUGHAM.--I n ver made any charg . I said he is a good person. That is why h h s s nction d so many High Schools, So many Colleges. When you sign for so many sanctions there must be some University to control them.

SRI G. B. SHANKAR RAO.--Thank you.

SRI C. M. ARUMUHGHAM.--Therefore, it is necessary to have a University at Shimoga. The Report makes a perfect and definite recommendation namely Shimoga should have priority over other Universities. There are certain strong persons, strong men like.........

SRI G. B. SHANKAR RAO.--Sheernaly Chandrasekhar.

SRI C. M. ARUMUGHAM.--No. He is t strong. There is Sri Kagodu Thimmappa, a stalwart.

MR. DEPUTY SPEAKER.--A socialist.

SRI C. M. ARUMUGHAM.--Is he a socialist now ?

MR. DEPUTY SPEAKER.—He was.

† SRI C. M. ARUMUGHAM.--He is an ex-socialist. Now he can fight and get it. There should not be any politics in sanctioning Shimoga University. Shri Chandrasekhar may raise his voice because he belongs to Shimoga. But I am raising my voice because it belongs to Karnataka. I like Shimoga. And your Jog Falls is good. There will be lot of visitors It will have a good attraction. Therefore, the hon. Minister for P.W.D. must take initiative now and tell our Education Minister. He has already come prepared to announce it that he would give the University. I would only say that now if the hon. Minister for Education Sri Shankar Rao announces a University at Shimoga, the Minister for Public Works will take care of all the Roads and Buildings in Hubli-Dharwad area, particularly the Education Minister's constituency. He is very popular in his constituency. He goes to every house whether it belongs to scheduled caste or scheduled tribe or some other community and takes 'Majjig '

(butter-milk). The roads there are bad, the buildings require repairs. So the Minister for Public Works will help him. So please announce it. The House will be happy, the people will be happy. All will be happy.

He is about 60 years now and let him live for sixty more years. Then we will erect his statue. He will be remembered in his country for sanctioning two Universities one at Gulbarga and another at Mangalore as a Minister for Education. Mr. Veershetty Kushnoor has never took any initiative when he was a Minister. It is also Mr. Shankar Rao, who will be remembered, for sanctioning several unauthorised colleges last year (laughter). I must speak that also. To ratify it you have brought a Bill. Therefore, Mr. Shankar Rao will be remembered for establishing a University at Mangalore and another University at Gulbarga. Mr. Gundu Rao as a Chief Minister and Mr. Shankar Rao as a Minister for Education will be remembered for appointing a competitive, qualified, highly cultured, honest, SC person Mr. Nagaraj as Vice Chancellor of Gulbarga University. There is no other person to compare with him. He will also be remembered for appointing a minority man as Vice Chancellor of the University at Mangalore.

With these few words, I once again support the resolution and request the Government, the Hon. Minister for Education to accept the resolution. Thank you.

ಶ್ರೀ ಎಚ್.ಟಿ. ಕೃಷ್ಣಪ್ಪ (ನಾಗಮಂಗಲ).—ಅಧ್ಯಕ್ಷರೇ ನಾನು ಕೇವಲ ೫ ನಿಮಿಷಗಳು ಮಾತ್ರ ಮಾತನಾಡುತ್ತೇನೆ. ಶಿವಮೊಗ್ಗಕ್ಕೆ ವಿಶ್ವ ವಿದ್ಯಾಲಯವನ್ನು ಮಂಜೂರು ಮಾಡುವ ವಿಚಾರ ಬಹಳ ವರ್ಷಗಳಿಂದಲೂ ಇದೆ. ಈ ಬೇಡಿಕೆಗೆ ಸಾಕಷ್ಟು ಅಧ್ಯಯನ ನಡೆದಿದೆ, ಮತ್ತು ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ. ಶ್ರೀಮಾನ್ ಆರ್ಮುಗಂರವರು ಈಗಾಗಲೇ ಈ ಸದನಕ್ಕೆ ತಿಳಿಸಿರುವ ಪ್ರಕಾರ ಒಂದು ವರದಿಯೂ ಕೂಡ ಸರ್ಕಾರಕ್ಕೆ ಬಂದಿದೆ. ಗುಲ್ಬರ್ಗಾ ಮತ್ತು ಮಂಗಳೂರು ವಿಶ್ವ ವಿದ್ಯಾಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ಈ ವರದಿ ಸರ್ಕಾರವನ್ನು ಮುಟ್ಟಿದೆ. ಅದರಲ್ಲಿ ಈಗಾಗಲೇ ಉಲ್ಲೇಖಿಸಿರುವ ಪ್ರಕಾರ ಮುಂದೆ ಕರ್ನಾಟಕ ರಾಜ್ಯದಲ್ಲಿ ವಿಶ್ವವಿದ್ಯಾಲಯ ಪ್ರಾರಂಭ ಮಾಡುವಂತಹ ಕಾಲದಲ್ಲಿ ಶಿವಮೊಗ್ಗಕ್ಕೆ ಆಧ್ಯತೆಯನ್ನು ಕೊಡಬೇಕೆಂಬುದು ವಿಚಾರವಿದೆ. ಈಗ ಶಾಲಾ ಕಾಲೇಜುಗಳು ದಿನೇ ದಿನೇ ಹೆಚ್ಚುತ್ತಿವೆ. ನಾವು ಹಿಂದೆ ಕೇವಲ ಮೈಸೂರು ವಿಶ್ವ ವಿದ್ಯಾಲಯವನ್ನು ಮಾತ್ರ ಕಂಡಿದ್ದೂ. ಈಗ ಕರ್ನಾಟಕ ರಾಜ್ಯದಲ್ಲಿ ೫ ವಿಶ್ವ ವಿದ್ಯಾಲಯಗಳಾಗಿವೆ. ಈಗ ೬ನೆಯ ವಿಶ್ವವಿದ್ಯಾಲಯವನ್ನು ಕೇಳತಕ್ಕ ನಿರ್ಣಯವನ್ನು ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ಸದನದಲ್ಲಿ ಮಂಡಿಸಿದ್ದಾರೆ. ನಾವು ಈ ವಿಶ್ವವಿದ್ಯಾಲಯವನ್ನು ಮಂಜೂರ ಮಾಡತಕ್ಕ ಕಾಲದಲ್ಲಿ ಬಹು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬಹುದಾದ ಅಂಶವೇನೆಂದರೆ, ಒಂದು ವಿಶ್ವ ವಿದ್ಯಾಲಯಕ್ಕೂ ಮತ್ತೊಂದು ವಿಶ್ವ ವಿದ್ಯಾಲಯಕ್ಕೂ ಇರತಕ್ಕ ಅಂತರ. ಮತ್ತು ಆಯಾ ಪ್ರದೇಶಗಳ ಕಾಲೇಜುಗಳ ಸಂಖ್ಯೆ ಮತ್ತು ಭೌಗೋಳಿಕವಾಗಿ ಇತಿಹಾಸ ದೃಷ್ಟಿ ಮತ್ತು ಪ್ರದೇಶಗಳ ವೈಶಿಷ್ಟ್ಯ ಇವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ನನ್ನ ದೃಷ್ಟಿಯಲ್ಲಿ ಹೇಳುವುದಾದರೇ, ಈ ಎಲ್ಲಾ ಅಂಶಗಳನ್ನು ಪೂರೈಸತಕ್ಕ ಜಾಗ ಶಿವಮೊಗ್ಗ ಆಗಿದೆ. ಇದು ನನ್ನ ವೈಯಕ್ತಿಕ ಅಭಿಪ್ರಾಯವೆಂತಲೂ ತಾವು ಭಾವನೆ ಮಾಡಿಕೊಳ್ಳಬಾರದು. ಇದರ ಬಗ್ಗೆ ಈಗಾಗಲೇ ಒಂದು ವರದಿ ಸರ್ಕಾರದ ಮುಂದೆ ಇರುವುದರಿಂದ, ಈ ವಿಚಾರದಲ್ಲಿ ಕ್ರಮಕೈಗೊಳ್ಳುವುದರಲ್ಲಿ ಸರ್ಕಾರವೇನಾದರೂ ಇನ್ನು ಮುಂದೆಯೂ ವಿಳಂಬ ಮಾಡಿದರೆ ಅದಕ್ಕೆ ಬೇರೆ ಅರ್ಥ ಕಲ್ಪನೆ ಮಾಡು

ವುದಕ್ಕೆ ಅವಕಾಶವಾಗುತ್ತದೆ. ಎಲ್ಲಿ ರಾಜಕೀಯವಾಗಿ ಹೆಚ್ಚಿನ ಪ್ರಭಾವವನ್ನು ಅಥವಾ ಪ್ರಾಬಲ್ಯವನ್ನು ಪ್ರದರ್ಶನ ಮಾಡತಕ್ಕ ಶಕ್ತಿ ಎಲ್ಲಿ ಇದೆ ಅವರಿಗೆ ಸರ್ಕಾರ ಮಣಿಯುತ್ತದೆ, ಯಾರು ಪ್ರಭಾವ, ಪ್ರಾಬಲ್ಯ ಬೀರುವುದಕ್ಕೆ ಸಾಧ್ಯವಿಲ್ಲವೋ ಅಂತಹವರ ಬಗ್ಗೆ ಸರ್ಕಾರ ಅಲಕ್ಷ್ಯ ಧೋರಣೆಯನ್ನು ತಾಳುತ್ತದೆ ಎನ್ನುವ ಒಂದು ಅರ್ಥಕ್ಕೆ ತಾವು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಸರ್ಕಾರದ ಮುಂದೆ ಇರತಕ್ಕ ವರದಿ ಏನಿದೆ ಅದು. ಶಿವಮೊಗ್ಗ ಜಿಲ್ಲೆಗೆ ವಿಶ್ವ ವಿದ್ಯಾಲಯವನ್ನು ಕೊಡಬೇಕೆಂಬುದು ಬೇರೆ ಕಡೆ ವಿಶ್ವ ವಿದ್ಯಾಲಯಗಳನ್ನು ಮಂಜೂರು ಮಾಡಿ. ಶಿವಮೊಗ್ಗಕ್ಕೆ ಮಂಜೂರು ಮಾಡದೇ ಇರುವುದರಿಂದ, ಇದಕ್ಕೆ ರಾಜಕೀಯ ಹಿನ್ನೆಲೆ ಇದೆ ಎನ್ನತಕ್ಕಂತಹ ಒಂದು ಭಾವನೆ ಬರುವುದಕ್ಕೆ ಸಾಧ್ಯವಿದೆ. ವಿಶಾಲ ಕರ್ನಾಟಕ ಆದಮೇಲೆ ಹೈದರಾಬಾದ್ ಕರ್ನಾಟಕ ಭಾಗಗಳಿಂದ ಬಂದಂತಹ ಜನ ನಮಗೆ ವಿಶ್ವ ವಿದ್ಯಾಲಯ ಬೇಕೆಂದು ಕೇಳಿದಾಗ ಅವರಿಗೆ ವಿಶ್ವವಿದ್ಯಾಲಯವನ್ನು ಮಂಜೂರು ಮಾಡಲಾಗಿದೆ. ವಿಶ್ವ ವಿದ್ಯಾಲಯ ಮಂಜೂರು ಮಾಡಬೇಕಾದರೆ ಶಾಲಾ ಕಾಲೇಜುಗಳ ಸಂಖ್ಯೆಯನ್ನು ಪರಿಗಣಿಸಬೇಕಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಶಾಲಾ ಕಾಲೇಜುಗಳಿಗೇನು ಕೊರತೆ ಇಲ್ಲ. ಶಿಕ್ಷಣದ ವೈವಿಧ್ಯತೆಯಲ್ಲಿ, ಶಿಕ್ಷಣ ಸಂಸ್ಥೆಗಳ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಯಾವ ದೃಷ್ಟಿಯಿಂದಲೂ ಶಿವಮೊಗ್ಗ ಜಿಲ್ಲೆ ಬೇರೆ ಯಾವ ಭಾಗಕ್ಕಿಂತಲೂ ವಿಶ್ವವಿದ್ಯಾಲಯ ಪಡೆಯಲಿಕ್ಕೆ ಅರ್ಹತೆಯನ್ನು ಪಡೆದಿದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ಏನೊಂದು ನಿರ್ಣಯವನ್ನು ಸದನದ ಮುಂದೆ ತಂದಿದ್ದಾರೆ, ಅದನ್ನು ಸರ್ಕಾರ ಅಂಗೀಕಾರ ಮಾಡಲಿಕ್ಕೆ ಯೋಗ್ಯವಾಗಿದೆ ಎನ್ನುವುದು ನನ್ನ ಖಚಿತವಾದ ಒಂದು ಅಭಿಪ್ರಾಯ. ಈ ವಿಚಾರದಲ್ಲಿ ಐದಾರು ವರ್ಷಗಳ ಹಿಂದೆ ನಾನು ಮಾನ್ಯ ಕಾಗೋಡು ತಿಮ್ಮಪ್ಪನವರು. ಬಂಗಾರಪ್ಪನವರು ವಿರೋಧ ಪಕ್ಷದಲ್ಲಿದ್ದಂತಹ ಕಾಲದಲ್ಲಿ ವಿಶ್ವವಿದ್ಯಾಲಯ ಬೇಕೆಂಬುದರ ಬಗ್ಗೆ ಚರ್ಚೆ ನಡೆಸಿ ಅದರ ಬಗ್ಗೆ ಅಧ್ಯಯನ ನಡೆಸಿ ಶಿವಮೊಗ್ಗಕ್ಕೆ ವಿಶ್ವವಿದ್ಯಾಲಯ ಬೇಕೆನ್ನುವ ಅಭಿಪ್ರಾಯವನ್ನು ಸರ್ಕಾರದ ಮುಂದೆ ತಂದು ಒತ್ತಾಯ ತಂದಿದ್ದೇವೆ. ಅಂದಿನಿಂದಲೂ ಇಂದಿನವರೆಗೆ ಇಷ್ಟೆಲ್ಲಾ ಬೆಳವಣಿಗೆ ಆಗಿದೆ. ಆದರೂ ತೀರ್ಮಾನ ಮಾತ್ರ ಆಗಿಲ್ಲ. ತಾವು ತಪ್ಪು ತಿಳಿದುಕೊಳ್ಳಬಾರದು, ಒಂದುವೇಳೆ ಶಿವಮೊಗ್ಗ ಜಿಲ್ಲೆಗೆ ವಿಶ್ವವಿದ್ಯಾಲಯ ಕೊಡುವುದರಲ್ಲಿ ವಿಳಂಬ ನೀತಿಯನ್ನು ಅನುಸರಿಸಿದರೆ, ನೀವು ರಾಜಕೀಯ ಶಕ್ತಿಗಳಿಗೆ ವಶವಾಗಿದ್ದೀರಿ ಎನ್ನುವ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆಂದು ನಾನು ಪುನಃ ಸ್ಪಷ್ಟಪಡಿಸುತ್ತೇನೆ. ಮೈಸೂರು ವಿಶ್ವವಿದ್ಯಾಲಯದ ಗಾತ್ರ ಕುಗ್ಗುತ್ತದೆ, ಎನ್ನುವುದಾದರೆ. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳು ಯಾವ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುತ್ತವೆ ಎನ್ನುವುದನ್ನು ಪುನಃ ತೀರ್ಮಾನ ಮಾಡಬಹುದು.

ಸ್ವಾಮಿ, ಇದರಲ್ಲಿ ರಾಜಕಾರಣಿಗಳು ಕೈ ಹಾಕುವುದರಿಂದ ಈ ಶಿಕ್ಷಣದ ಮಟ್ಟವೂ ಕೂಡ ಇಳಿಯುತ್ತದೆ. ಅಲ್ಲದೆ ವಿಶ್ವವಿದ್ಯಾಲಯದ ಆಡಳಿತವೂ ಕೆಟ್ಟು ಹೋಗುತ್ತದೆ. ಈ ಬಗ್ಗೆ ಮಾನ್ಯ ಶ್ರೀಕಂಠಯ್ಯನವರ ಭಾವನೆ ಏನು ಅನ್ನುವುದು ನನಗೆ ಅರ್ಥವಾಗುತ್ತದೆ. ಮೈಸೂರು ವಿಶ್ವವಿದ್ಯಾಲಯಕ್ಕೆ ಹಾಸನ ಜಿಲ್ಲೆಯನ್ನು ಸೇರಿಸಬೇಕೇ ಬೇಡವೇ ಅನ್ನುವುದನ್ನು ತಜ್ಞರ ಸಮಿತಿಗೆ ಒಪ್ಪಿಸೋಣ. ಹಾಸನ ಜಿಲ್ಲೆ ಇದರ ವ್ಯಾಪ್ತಿಗೆ ಬರಬೇಕೇ ಬೇಡವೇ ಅನ್ನುವುದನ್ನು ಅವರಿಗೆ ಒಪ್ಪಿಸೋಣ. ರಾಜಕಾರಣಿಗಳು ಈ ಶಿಕ್ಷಣದ ನೀತಿಯನ್ನು ರೂಪಿಸುವುದಕ್ಕಾಗಲಿ ಅಥವಾ ಶಿಕ್ಷಣದ ವಿಚಾರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗಲಿ ಆದೇಶವನ್ನು ಕೊಡುವುದಕ್ಕಾಗುವುದಿಲ್ಲ. ಹಾಗೆಂದ ಮಾತ್ರಕ್ಕೇನೇ ಅವರಿಗೆ ಅವಕಾಶ ಮಾಡಿಕೊಡಬಾರದು ಅನ್ನುವ ಅರ್ಥವಲ್ಲ. ಅವರೇ ಈ ದೇಶದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ಅವರಿಗೆ ಇದರಲ್ಲಿ ಅವಕಾಶ ಇಲ್ಲದೇ ಇರುವ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಮಾತನಾಡುವಾಗ ಇಂತಿಂಥಾ ಜಿಲ್ಲೆ ಅಂತ ಮಾತನಾಡಿದ್ದಕ್ಕೆ ನಾನು ಹೇಳಿದೆ. ಶಿವಮೊಗ್ಗ, ಹಾಸನ ಮತ್ತು ಚಿತ್ರದುರ್ಗ ಜಿಲ್ಲೆ ಅಂತ ಅವರು ಏತಕ್ಕೆ ಮೆನ್‌ಷನ್ ಮಾಡಬೇಕಾಗಿತ್ತು. ಅದೂ ಕೂಡ ರಾಜಕೀಯವೇ ಅಂತ ಹೇಳುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಹೇಗಿದ್ದರೂ ಕೂಡ ಮಂಡ್ಯ ಜಿಲ್ಲೆ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರುತ್ತೇ ವಿನಾ ಬೇರೆ ಎಲ್ಲೂ ಸೇರುವುದಕ್ಕಾಗುವುದಿಲ್ಲ. ಇವರೂ ಕೂಡ ಅದನ್ನು ಬಿಟ್ಟು ಬಿಡುವುದಕ್ಕಾಗುವುದಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಹಾಸನ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಏನು ಇವೆ ಅದರಲ್ಲಿ ಕೆಲವು ಭಾಗಗಳು ಮಲೆನಾಡಿಗೆ ಸೇರಿರುವುದರಿಂದ, ಒಂದುವೇಳೆ ನೀವು ಮಲೆನಾಡು ಯೂನಿವರ್ಸಿಟಿ ಅಂತ ತೆಗೆದರೆ ಆಗ ಬೇಕಾದರೆ ಅಲ್ಲಿರುವ ಕೆಲವು ಭಾಗ

ಗಳನ್ನು ಸೇರಿಸಿಕೊಳ್ಳಬಹುದು ಅದನ್ನು ಯಾರೂ ಕೂಡ ಹೇಳಬೇಕಾಗಿಲ್ಲ. ತಮಗೆ ಹೇಳಬೇಕಾದರೆ ಹಾಸನದಲ್ಲಿ ಅರ್ಧ ಭಾಗ ಮಲೆನಾಡಿಗೆ ಬರುತ್ತದೆ, ಇನ್ನು ಅರ್ಧ ಭಾಗ ಬಯಲು ಸೀಮೆಗೆ ಬರುತ್ತದೆ. ಅದಕ್ಕೋಸ್ಕರ ನಾನು ಹೇಳಿದೆ ನೀವು ಮಲೆನಾಡು ಯೂನಿವರ್ಸಿಟಿ ಅಂತ ಇಡುವುದಾದರೆ ಆವಾಗ ಅರ್ಧ ಭಾಗ ಅಲ್ಲಿಗೆ ಸೇರಿಸಿಕೊಳ್ಳಬಹುದು ಅಂತ. ಇದರಲ್ಲಿ ಇನ್ನಾವ ಉದ್ದೇಶವೂ ಇಲ್ಲ. ಈಪ್ರೊತ್ತಿನ ದಿವಸ ಈ ವಿಶ್ವವಿದ್ಯಾನಿಲಯದಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಇರುವುದರಿಂದ ಈ ಶಿಕ್ಷಣದ ಮಟ್ಟ ಕೆಳಗಿಳಿಯುತ್ತಾ ಇದೆ. ನಮ್ಮಂಥಾ ನಿಮ್ಮಂಥಾ ರಾಜಕಾರಿಣಿಗಳು ಹಸ್ತಕ್ಷೇಪ ಮಾಡುವುದರಿಂದ ಈ ರೀತಿ ಆಗುತ್ತಾ ಇದೆ. ಎಲ್ಲಾ ವಿಧದಲ್ಲೂ ಹೀಗೆ ಆಗುತ್ತಾ ಇದೆ. ಇದು ನನ್ನ ವೈಯುಕ್ತಿಕ ಅಭಿಪ್ರಾಯ. ಅದಕ್ಕೆ ನಾನು ಹೇಳುವುದೇನೆಂದರೆ ಈ ವಿದ್ಯಾ ಸಂಸ್ಥೆಗಳಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟರೆ ಅಥವಾ ವಿಶ್ವವಿದ್ಯಾನಿಲಯಗಳಿಗೆ ನಮ್ಮ ಹಸ್ತಕ್ಷೇಪ ಇಲ್ಲದೇ ಹೋದರೆ ಆವಾಗ ತಮ್ಮ ಸ್ವಾಯತ್ತತೆ ಕಾಪಾಡಿಕೊಂಡು ಅಲ್ಲಿಯ ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡಿಕೊಂಡು ಹೋಗಬಹುದು. ಒಟ್ಟಿನಲ್ಲಿ ಹೇಳುವುದಾದರೆ ರಾಜಕಾರಿಣಿಗಳ ಹಸ್ತಕ್ಷೇಪ ಎಷ್ಟು ಕಡಿಮೆ ಇದ್ದರೆ ಅಷ್ಟೂ ಒಳ್ಳೆಯದು; ಈ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಹೇಳುತ್ತಿದ್ದೇನೆ. ಹಾಗಾದರೆ ಈ ಶಿಕ್ಷಣ ಕ್ಷೇತ್ರ ಚೆನ್ನಾಗಿ ಬೆಳೆಸುಕೊಂಡು ಹೋಗುವುದಲ್ಲದೆ ಇದರಿಂದ ಉತ್ತಮ ಪ್ರಗತಿಯನ್ನೂ ಸಹ ಸಾಧಿಸಬಹುದು. ಈ ವಿಚಾರವನ್ನು ನಾನು ಹೇಳಿದ ಮಾತ್ರಕ್ಕೆ ಮಾನ್ಯ ಶ್ರೀಕಂಠಯ್ಯನವರನ್ನಾಗಲಿ ಅಥವಾ ಮತ್ತೊಬ್ಬರನ್ನಾಗಲಿ ನೋಯಿಸಬೇಕೆನ್ನುವ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಈ ವಿಶ್ವವಿದ್ಯಾನಿಲಯಗಳ ಬಗ್ಗೆ ರೂಪರೇಷೆಗಳು ಹೇಗೆ ಇರಬೇಕು ಅಂತ ಹೇಳುವುದಕ್ಕೆ ಅವರಿಗೆ ಹೇಗೆ ಹಕ್ಕು ಇದೆಯೋ ಹಾಗೆ ನನಗೂ ಹಕ್ಕು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೊನೆಯದಾಗಿ ಹೇಳಬೇಕಾದರೆ ಮಾನ್ಯ ವಿದ್ಯಾ ಸಚಿವರು ಈ ವಿಚಾರದಲ್ಲಿ ಉತ್ತರ ಹೇಳುವಾಗ ಇದರ ಬಗ್ಗೆ ನಕಾರಾತ್ಮಕವಾಗಿ ಉತ್ತರ ಕೊಡದೆ, ಮಾನ್ಯ ಆರ್ಮುಗಂರವರು ಹೇಳಿದ ಹಾಗೆ ನೇರವಾಗಿ ಈ ಸದನದಲ್ಲಿ ಇದನ್ನು ಈಗಲೇ ಮಂಜೂರು ಮಾಡಿದ್ದೇನೆ ಅಂತ ಈ ಸದನದಲ್ಲಿ ಪ್ರಕಟಣೆ ಮಾಡಬೇಕು ಎಂದು ಹೇಳುತ್ತೇನೆ

ಉಪಾಧ್ಯಕ್ಷರು.—ಈಗಾಗಲೇ ಈ ಸದನದಲ್ಲೇ ಮಾನ್ಯ ವಿದ್ಯಾ ಸಚಿವರು ಒಂದು ವಿಶ್ವವಿದ್ಯಾನಿಲಯವನ್ನು ಮಂಜೂರು ಮಾಡುತ್ತೇನೆ ಅಂತ ಹೇಳಬೇಕು ಎಂದು ತಮ್ಮ ಇಷ್ಟವೇ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಹೌದು, ಹಾಗೆ ಮಾಡುವುದಾದರೆ, ಈ ರೀತಿಯಾದ ಒಂದು ತೀರ್ಮಾನವನ್ನು ತೆಗೆದುಕೊಂಡು ಈ ಸದನದಲ್ಲಿ ಮಂಜೂರು ಮಾಡಿದ್ದೇನೆ ಅಂತ ಹೇಳುವುದಾದರೆ ಅವರ ಈ ತೀರ್ಮಾನವನ್ನು ನಾವು ಸ್ವಾಗತ ಮಾಡುತ್ತೇವೆ, ಅಲ್ಲದೆ ಅವರನ್ನು ನಾವು ಮೆಚ್ಚಿಕೊಳ್ಳುತ್ತೇವೆ ಅಲ್ಲದೆ ಮಾನ್ಯ ವಿದ್ಯಾ ಸಚಿವರ ಹೆಸರು ಇದರ ಬಗ್ಗೆ ಶಾಶ್ವತವಾಗಿ ಉಳಿಯುತ್ತದೆ. ಈಗಲೇ ಅವರು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಉತ್ತರ ಹೇಳಬೇಕು ಎಂದು ಅವರನ್ನು ಕಳಕಳಿಯಿಂದ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI PRABHAKAR TELKAR (Chittapur).—While supporting this non-official resolution to have 6th University at Shimoga, I want to just observe a few points. As it has been argued by my other friends in support of having one more University at Shimoga, I feel it necessary that Shimoga, Chikkamagalur and Chitradurga which are very adjacent to each other, there should be a University at Shimoga. If we look at the map of the Karnataka, in Northern Karnataka we have got two universities– one at Gulbarga and the other Karnataka University at Dharwar. Than, again in the south at Mangalore, Mysore and Bangalore universities are situated, and in the middle portion of Karnataka *i.e.*, Shimoga, Chickamagalur and Chitradurga there is a vacum and a university is required there to facilitate the public and students of that area who have been clubbed with either Mysore university or Bangalore University. From the point of view of other matters also such as the historical and cultural background

of this area, economic and social conditions of this area, I feel it necessary that there should be a University at Shimoga. Now, at present Bangalore University has got about 86 colleges which is burdened with more number of colleges. Similarly, the Mysore University has got about 80 colleges. Then, if we look to the other Universities at Gulbarga and other places there are 39 and similarly if we just consider Shimoga, which is quite feasible where you could have 37 colleges it will be of use and this University is quite feasible. While going through the report that has been given to the Government, it has been observed that the Shimoga University should be established. Gulbarga and Mangalore Universities have been established and it has been observed in the report that priority should be given to Shimoga also. But, unfortunately that has not been considered by the Government. But, at this juncture the feeling of several Members of this august body is that the people of this area, which are in the middle of our Karnataka area should also be provided with the University so as to facilitate the public and the students of this area. I think the cost is not more also as it has been observed in the report. It has been observed that there is sufficient space and the people are ready to come forward and in view of these facts, I fully support this resolution and request the Government to consider the establishment of the University at Shimoga.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಉಪಸಭಾಧ್ಯಕ್ಷರೇ, ಈಗ ಆರನೇ ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗದಲ್ಲಿ ಸ್ಥಾಪನೆ ಮಾಡಬೇಕೆನ್ನುವ ವಿಚಾರವನ್ನು ನಾನು ಬಲವಾಗಿ ಸಮರ್ಥಿಸುತ್ತೇನೆ. ಇದನ್ನು ನಾನು ಸಮರ್ಥಿಸುವುದು ಏತಕ್ಕೆಂದರೆ ಈಗ ಎಲ್ಲಾ ಕಡೆಯೂ ಕೊಟ್ಟಿದ್ದೀರಿ ಅದೇ ರೀತಿ ನಮಗೂ ಕೂಡ ಒಂದು ವಿಶ್ವವಿದ್ಯಾನಿಲಯವನ್ನು ಕೊಡಿ ಎಂದು ಕೇಳುತ್ತೇವೆ, ಅದನ್ನು ಕೊಡುವುದೇ ಬೇಡವೇ ಅಂತ ಹೇಳುವುದರಲ್ಲಿ ಅರ್ಥವಿಲ್ಲ. ಈ ಭಾಗದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳದೇ ಹೋದರೆ ಸ್ವಾಮಿ ನಿಜವಾಗಿಯೂ ಕೂಡ ಮಲೆನಾಡು ಭಾಗದ ಜನ ಇದರಲ್ಲಿ ಏನೋ ಒಂದು ರಾಜಕೀಯ ಹಿನ್ನಲೆ ಅಥವಾ ಶಕ್ತಿ ಇರಬೇಕು ಆದರೆ ಇಲ್ಲಿ ಕಡಿಮೆಯಾಗಿದೆ ಅಂತ ಅವರು ತಿಳಿದುಕೊಳ್ಳುವುದಕ್ಕೆ ಕಾರಣವಾಗುತ್ತದೆ ಅನ್ನುವ ವಿಚಾರವನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ಮಾನ್ಯ ವಿದ್ಯಾ ಮಂತ್ರಿಗಳು ಮತ್ತು ಸರ್ಕಾರ ಇದನ್ನು ಗಮನಿಸಬೇಕು. ಈ ಭಾಗದ ಜನಗಳಾದ ನಾವು ಇದರ ಬಗ್ಗೆ ಆಸೆಪಟ್ಟುಕೊಂಡಿದ್ದೇವೆ, ಇದರಲ್ಲಿ ನ್ಯಾಯ ಇದೆ ತಾವು ಇದನ್ನು ಗಮನಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ ಏತಕ್ಕೆಂದರೆ ಹಿಂದಿನ ಸರ್ಕಾರ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವ ಬಗ್ಗೆ ಏನು ಒಂದು ಸಮಿತಿಯನ್ನು ನೇಮಿಸಿತ್ತು, ಆ ಸಮಿತಿಯ ವರದಿಯಲ್ಲಿ ಆ ಅಧ್ಯಕ್ಷರು ಗುಲ್ಬರ್ಗ ಮತ್ತು ಮಂಗಳೂರಿನಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟಿದ್ದರಿಂದ, ಅಲ್ಲಿಗೆ ಕೊಟ್ಟಿದ್ದಾರೆ. ಮತ್ತು ಮೊದಲನೆಯದಾಗಿ ಇದನ್ನೂ ಸಹ ಆಗಬೇಕು ಅಂತ ಹೇಳಿದ್ದಾರೆ. ಅವರು ಈ ರೀತಿ ಹೇಳಿರುವುದರಲ್ಲಿ ಅರ್ಥ ಇದೆ. ಆಡಳಿತಾತ್ಮಕವಾಗಿ ಇದರಲ್ಲಿ ವೆಚ್ಚ ಕಡಿಮೆ ಬರುತ್ತದೆ. ಬೇರೆ ಕಡೆ ವಿಶ್ವವಿದ್ಯಾನಿಲಯಗಳನ್ನು ಏನು ಸ್ಥಾಪನೆ ಮಾಡುತ್ತಾರೋ ಅಲ್ಲಿ ಆಡಳಿತಾತ್ಮಕ ವೆಚ್ಚ ಎಷ್ಟಾಗುತ್ತದೋ ಅದರಲ್ಲಿ ಅರ್ಧ ಭಾಗದಷ್ಟು ಮಾತ್ರ ಹಣ ಇಲ್ಲಿ ಖರ್ಚಾಗುತ್ತದೆ ಅಷ್ಟೆ ಎಂದು ಹೇಳಿದ್ದಾರೆ. ಒಟ್ಟು ಇದರಲ್ಲಿ ಆಡಳಿತಾತ್ಮಕ ವೆಚ್ಚ ಕಡಿಮೆ ಬರುತ್ತದೆ ಅನ್ನುವ ಮಾತನ್ನು ಹೇಳಿದ್ದಾರೆ.

೧೨-೩೦ ಪಿ.ಎಂ.

ಮಂಗಳೂರು ಮತ್ತು ಕಲ್ಬುರ್ಗಿ ವಿಶ್ವವಿದ್ಯಾನಿಲಯಗಳ ಈ ಆಡಳಿತಾತ್ಮಕ ವೆಚ್ಚ ಏನು ಬರುತ್ತಿದೆ ಅದಕ್ಕಿಂತ ಶಿವಮೊಗ್ಗ ವಿಶ್ವವಿದ್ಯಾನಿಲಯಕ್ಕೆ ಕಡಿಮೆಯಾಗುತ್ತದೆ. ಅಲ್ಲಿ ವಿದ್ಯಾಸಂಸ್ಥೆಗಳು ಹೆಚ್ಚಾಗಿ ಇದೆ, ಅಲ್ಲದೇ ಪಿ.ಜಿ. ಸೆಂಟರ್ ಕೂಡ ಇದೆ. ಮತ್ತು ಭೌಗೋಳಿಕವಾಗಿ ಐತಿಹಾಸಿಕ ಕೇಂದ್ರವಾಗಿರತಕ್ಕಂಥ ಸ್ಥಿತಿಯಲ್ಲಿದೆ. ಒಳ್ಳೆಯ ವಾತಾವರಣ ಇದೆ, ಸ್ಥಳ ಕೂಡ ಇದೆ. ಅಲ್ಲಿ ಒಂದು ಲೇಕ್ ಯೂನಿವರ್ಸಿಟಿಯನ್ನು ಮಾಡಬೇಕು. ಹಿಂದೆ ಶ್ರೀ ಟಿ. ಎಂ. ಎ. ಪೈರವರು ಅಲ್ಲಿ ಒಂದು ಯೂನಿವರ್ಸಿಟಿಯನ್ನು ಮಾಡಬೇಕೆಂದು ಆಶೆಯನ್ನು ಇಟ್ಟುಕೊಂಡಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಪಿ. ಜಿ. ಸೆಂಟರ್ ಇರುವ ಸ್ಥಳ ಏನಿದೆ ಅಲ್ಲಿಗೆ ವಿದೇಶೀಯರು ಬಂದು ನೋಡಿಕೊಂಡು ಹೋಗಿ ಭೌಗೋಳಿಕ ಹಿನ್ನಲೆಯಲ್ಲಿ ಹೊಂದಿದಂಥ ಆ ಪ್ರದೇಶದಲ್ಲಿ ಇಡೀ ರಾಷ್ಟ್ರದಲ್ಲೇ ಒಂದು ಮಾದರಿಯಾದ ವಿಶ್ವವಿದ್ಯಾನಿಲಯವನ್ನು ಅಲ್ಲಿ ಕಟ್ಟುವುದು ಎಂದು ಹೇಳಿದ್ದಾರೆ. ಅಂತಹ ಒಂದು ಭೌಗೋಳಿಕ ಹಿನ್ನಲೆ ಹೊಂದಿದಂಥ ಪ್ರದೇಶವಾಗಿದೆ. ಇಷ್ಟೆಲ್ಲಾ ಇದ್ದೂ ಕೂಡ ಅಲ್ಲಿಗೆ ಒಂದು ಯೂನಿವರ್ಸಿಟಿಯನ್ನು ಕೊಟ್ಟಿಲ್ಲ. ಶ್ರೀ ಆರ್ಮುಗಂರವರು ಹೇಳಿದಂತೆ ಈ ಬಗ್ಗೆ ನಿಜವಾಗಿಯೂ ಕೂಡ ಮಾನ್ಯ ವಿದ್ಯಾ ಮಂತ್ರಿಯವರು ಒಂದು ದೃಢ ನಿರ್ಧಾರವನ್ನು ತೆಗೆದುಕೊಂಡು ಈ ಕೆಲಸವನ್ನು ಮಾಡಿದರೆ ಒಂದು ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡಂಥ ಕೀರ್ತಿಗೆ ಪಾತ್ರರಾಗುತ್ತಾರೆ. ಬಹುಶಃ ಈಗಾಗಲೇ ಅವರು ಆ ಕೀರ್ತಿಗೆ ಪಾತ್ರರಾಗಿದ್ದಾರೆ. ಒಂದು ವಿಶ್ವವಿದ್ಯಾನಿಲಯ ಕೂಡ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಕಾಲದಲ್ಲಿ ೨ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಆದದ್ದು ಮತ್ತು ಈಚೆಗೆ ಇನ್ನೊಂದು ವಿಶ್ವವಿದ್ಯಾನಿಲಯ ಆಗುವುದು ಸಂತೋಷದ ವಿಚಾರ. ಗುಲ್ಬರ್ಗ ಮತ್ತು ಮಂಗಳೂರಿನಲ್ಲಿ ಈ ಎರಡು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿದಂಥ ಕೀರ್ತಿಗೆ ಅವರು ಈಗಾಗಲೇ ಪಾತ್ರರಾಗಿದ್ದಾರೆ. ಅದರ ಜೊತೆಗೆ ಈ ಒಂದು ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಮಾಡಬೇಕಿತ್ತು. ಕಳೆದ ವರ್ಷ ಕೂಡ ಅವರು ಈ ಬಗ್ಗೆ ಹೇಳಿದ್ದಾರೆ. ಮುಂದಿನ ವರ್ಷ ನಿಮಗೆ ನಾವು ಶಿವಮೊಗ್ಗದಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಕೊಡುತ್ತೇವೆ, ಎನ್ನತಕ್ಕಂಥ ಭರವಸೆಯನ್ನು ಅವರು ಹೇಳಿದ್ದಾರೆ, ಆ ಒಂದು ಮಾತನ್ನು ಉಳಿಸಿಕೊಂಡು ಖಂಡಿತವಾಗಿಯೂ ಈ ವರ್ಷ ಈ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವಂಥ ಒಂದು ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಮ್ಮ ಭಾಗದ ಜನಗಳ ಮನಸ್ಸಿನಲ್ಲಿ ನಾವು ಏನೋ ಒಂದು ರೀತಿಯಲ್ಲಿ ಈ ವಿಚಾರದಲ್ಲಿ ಉದಾಸೀನ ಮಾಡುತ್ತಾ ಇದ್ದೇವೆ, ಸರ್ಕಾರದವರು ನಮ್ಮನ್ನು ಕಡೆಗಣಿಸುತ್ತಿದ್ದಾರೆ ಎಂದು ತಿಳಿದುಕೊಳ್ಳುವುದಕ್ಕೆ ಅವಕಾಶವಾಗಬಾರದು. ಮಾನ್ಯ ವಿದ್ಯಾ ಮಂತ್ರಿಗಳು ಈ ಮನೆಯಲ್ಲಿ ಕೊಟ್ಟಂಥ ಮಾತನ್ನು ಉಳಿಸಿಕೊಂಡಿದ್ದಾರೆ ಎನ್ನತಕ್ಕಂಥ ಭಾವನೆ ಅವರಲ್ಲಿ ಬರಬೇಕು. ಈ ವಿಶ್ವವಿದ್ಯಾನಿಲಯವನ್ನು ಮಾನ್ಯ ವಿದ್ಯಾ ಮಂತ್ರಿಯವರು ಸ್ಥಾಪನೆ ಮಾಡಿಕೊಡದಿದ್ದರೆ, ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳ ಜೊತೆಯಲ್ಲಿ ಇದು ಸ್ಥಾಪನೆಯಾಗದಿದ್ದರೆ ಮುಂದಿನ ವರ್ಷ ಇದನ್ನು ಮಾಡಿಕೊಡುತ್ತೇವೆ, ಇಲ್ಲಿ ವಿಶ್ವವಿದ್ಯಾನಿಲಯ ಮುಂದಿನ ವರ್ಷ ಬರುತ್ತದೆ, ಎಂದು ಮಾನ್ಯ ವಿದ್ಯಾ ಮಂತ್ರಿಯವರು ಹೇಳಿದ್ದರೂ ಕೂಡ ನೀವೇನೂ ಈ ಬಗ್ಗೆ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಜನರು ನಮ್ಮನ್ನು ಸಹ ದೂರುವ ಸಂಭವ ಇದೆ. ಆದ್ದರಿಂದ ನಮ್ಮನ್ನು ತಾವು ಉಳಿಸಿ, ತಾವು ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿ. ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಎಂದು ಜನರಿಂದ ಹೊಗಳಿಸಿಕೊಳ್ಳಬೇಕು. ತಾವು ೨ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿದ್ದು ಕಡಿಮೆಯ ಕೆಲಸವೇನಲ್ಲ. ಈ ೨ ವಿಶ್ವವಿದ್ಯಾನಿಲಯಗಳ ಜೊತೆಯಲ್ಲಿ ೩ನೆಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ್ದಾರೆ ಎನ್ನತಕ್ಕಂಥ ಕೀರ್ತಿ ತಮ್ಮ ಪಾಲಿಗೆ ಇರಲಿ. ಅಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇನೆ ಎಂದು ತಾವು ಒಂದು ವಾಗ್ದಾನವನ್ನು ಮಾಡಿ, ನಮಗೆ ಬಹಳ ದಿವಸಗಳಿಂದಲೂ ಇರತಕ್ಕಂಥ ಆ ಒಂದು ಅಪೇಕ್ಷೆಯನ್ನು ಪೂರ್ಣ ಮಾಡಬೇಕು, ಮಲೆನಾಡಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ನಾಂದಿ ಹಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI K. BHASKAR NAIDU (Bellary).—Sir, we have been discussing about the Universities and Sri Sheernali Chandrasekhar has brought in to say that there should be another University called "Sahyadri University". I know by mere creation of Universities, there will be more diversities. You have been creating Universities after Universities not looking into the needs due to the political pulls and pressures. Sri Chandrasekhar has said that a University at his place is essential and how it could come before Gulbarga and Magalore Universities. If you want to bring up a place that is backward, it has to have priority, that should not be compared at all. You may have a charming face. But if you have a cancer in your leg, do you want to powder your face or cure from cancer ? Which is most important thing ? I would naturally feel that the powdering of the face is not as important as curing cancer. Sir, if a backward district gets a University, the Government has to be complimented because the neglect of such places and districts should not be continued. Which place could deserve a University than Vijayanagar? I would like to know. Sir, after fifteen years of my friendship with Sri Srikantaiah I hadthehonour of following the other day only for the first time to his native place. It consists of a population of 7,500. I learnt that Rs. 70 crores has been spent there. The political fight here between the Gowdas *i.e.*, Sri Devegowda and Sri Srikanthagowda, is to show that they are fighting. But when it comes to the improvement, I say, they have fought together. And they know the art of cajoling the Chief Minister and they have made a mirror of their place. Sir. if the Universities could be given on that ground, yon can understand. I know one more thing. In a distance of fourteen miles, they have got a number of Colleges. Hon. Education Minister, please know the District of Bellary. In Bellary Headquarters. there is one Government Arts College. You think this is justice ? Only last year you gave an Engineering College. And I am wondering what is happening there. Already Rs. 25/- lakhs have been collected and in the Sangha, there is in-fighting as to who should swallow the money. This has happened there. The Sangha Secretary himself has written to say "Please take it over because the other man is trying to swallow the money." Nothing is there. And people like Sri Srikantaiah and Sri Deve Gowda want a University in their small place what do you call 'Hemavathy University'. So they will surely have it because they know how to pull the threads. But what about the places like Bellary ? The Vijaynagar Empire, where learning of Art and Culture was a most important thing, is there a College ? For two Agricultural Colleges there is a University. Is it not true ? I would like to have a University like 'City University.' Let Bellary

City have a University like the Delhi University. You can have. There is nothing wrong. So, the question of Universities is not like taking an orange from the tree. It needs lots and lots of other things. An Engineering College has been granted to Bellary. Why I am saying this is because the money has been collected. Where the boys sit down ? They do not have class-room. Where they learn ? In industries. What is it that they have to learn ? Nothing but strike. How to 'Strike' is taught in the Engineering Colleges because there is no accommodation for the boys. Basically we do not have enough Schools and Colleges. And you are thinking of a University at every place. I am not able to understand. May be, Shimoga might give light (electricity) ; Kolar gives gold. Mr. Arumugham, you give gold to the State, one of the richest metals you are giving. So, have a University. What does Bellary give ? Plenty of iron ore exported to the world contries. So, why not give us a University ? And that is why the Government must take care of this. It is easy to give away anything that is wanted. But to maintain it an to the standards is very difficult. The present education system itself in our country is going down day by day. You have to bring it up. It is just to call something as University which might provide employment to some people or their own community men becoming Vice-Chancellors, lecturers, this and that. The most important thing is basically to see whether what education is wanted and what education is imparted there. That is the most important thing.

Taking advantage of this situation I don't mind if a University is given to Shimoga but I would appeal to the Education Minister to please extend the same generosity to Bellary also. You can have one more university at Raichur. There, people are found of Urdu because Urdu is a sweet language and everybody wants to learn it. We have got enough number of colleges in Raichur and Bellary, and at Sandur there is a Post-graduate centre. Establishment of an university would be very much helpful to the students of that area. Already at Sandur, there is a Posrgraduate center and you can make it is a university, or I suggest. the Government can have an university at Hampi which is a historical place and which was once ruled by King Krishnadevaraya. Last time during the budget speech, I remember, Sri. Veerappa Moily has made a remark that he is going to improve Hampi as a tourist center just on the lines of Pompey or some other city in Rome. At Hampi we have a large area of open space to establish a big university. We have got acres and acres of land and colleges and buildings can come up. There is a beatifull river *i.e.*, Tungabhadra, in the midst of Hampi

and there will be no water problem. The Tungabhadra with its blue and sweet water washes the walls of the temples there and there is so much of water that one can drown. You can name the university after the name of Krishnadevaraya who has done so much for us in Karnataka and whose reputations have gone far and wide. Krishnadevaraya was glorious king. Sir, if the Hon'ble Minister is going to announce the establishment of an university at Shimoga I request him to add one more university at Bellary and people of Bellary would come to Bangalore even without ticksts if necessary by buses and trains to garland the Hon'ble Minister. Thank you.

ಶ್ರೀ ಬಿ. ಎನ್. ಕೆಂಗೇಗೌಡ (ಚಾಮರಾಜ).—ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಶಿರ್ನಾಳಿ ಚಂದ್ರಶೇಖರ್‌ರವರು ತಂದಿರತಕ್ಕಂತಹ ನಿರ್ಣಯವನ್ನು ನಾನು ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಇವತ್ತು ಮೈಸೂರು ಯೂನಿವರ್ಸಿಟಿ ಇದೆ. ಇದರ ಜೊತೆಗೆ ಶಿವಮೊಗ್ಗದಲ್ಲಯೂ ಕೂಡ ಒಂದು ಯೂನಿವರ್ಸಿಟಿಯನ್ನು ಮಾಡಬೇಕೆಂದು ನಿರ್ಣಯವನ್ನು ತಂದಿರುವುದು ಬಹಳ ಒಳ್ಳೆಯದು ಏತಕ್ಕೆಂದರೆ ಈ ಶಿವಮೊಗ್ಗ ಯೂನಿವರ್ಸಿಟಿಯನ್ನು ಒಂದು ಲೇಖಕ್ ಯೂನಿವರ್ಸಿಟಿಯನ್ನಾಗಿ ಮಾಡಬೇಕೆಂದು ಈಗಾಗಲೇ ಅಲ್ಲಿ ೮೦೦ ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಅಲ್ಲಿಗೆ ತಾವು ಒಂದು ಯೂನಿವರ್ಸಿಟಿಯನ್ನು ಕೊಡತಕ್ಕದ್ದು ನಿಜವಾಗಿಯೂ ಕೂಡ ಯೋಗ್ಯವಾದ ವಿಷಯವೆಂದು ನಾನು ಸೂಚಿಸಬಯಸುತ್ತೇನೆ. ಈಗ ಶಿವಮೊಗ್ಗದಲ್ಲಿ ಭದ್ರಾ ಪ್ರಾಜೆಕ್ಟ್ ಆಗಿರುವುದರಿಂದ ಮತ್ತು ಅದರ ಪಕ್ಕದಲ್ಲಿಯೇ ಜೋಗ್‌ಪಾಲ್ಸ್ ಇರುವುದರಿಂದ ಬಹುಶಃ ಅಲ್ಲಿಗೆ ಕರ್ನಾಟಕದ ದೇಶ ಮತ್ತು ವಿದೇಶಗಳಿಂದ ನೋಡಲು ಜನರು ಬರುತ್ತಾರೆ. ಆದ್ದರಿಂದ ಶಿವಮೊಗ್ಗದಲ್ಲಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸುವುದು ಸೂಕ್ತವೆಂದು ನಾನು ಸೂಚಿಸುತ್ತೇನೆ. ಮತ್ತು ಆಡಳಿತ ಸುಸೂತ್ರವಾಗಿ ನಡೆಯಬೇಕಾದರೆ ಸರ್ಕಾರ ಇದಕ್ಕೆ ಮನ್ನಣೆ ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಒಂದು ಯೂನಿವರ್ಸಿಟಿ ಇಷ್ಟು ಕಾಲೇಜುಗಳು ಇರಬೇಕೆಂದು ಒಂದು ನಿಯಮವೇನೂ ಇದೆ. ಆದರೆ ಈಗಾಗಲೇ ಶಿವಮೊಗ್ಗ ಯೂನಿವರ್ಸಿಟಿಗೆ ಸೇರುವಂತಹ ೩೯ ಕಾಲೇಜುಗಳು ಇವೆ. ಮತ್ತೇ ಅಲ್ಲಿ ಇನ್ನು ಹೆಚ್ಚು ಕಾಲೇಜುಗಳು ಸ್ಥಾಪನೆಯಾಗುವ ಸಂಭವ ಇದೆ. ಈ ದೃಷ್ಟಿಯಿಂದ ಸರ್ಕಾರ ಶಿವಮೊಗ್ಗಕ್ಕೆ ಒಂದು ಯೂನಿವರ್ಸಿಟಿಯನ್ನು ಮಂಜೂರು ಮಾಡುವುದು ಸೂಕ್ತವೆಂದು ನಾನು ಹೇಳಬಯಸುತ್ತೇನೆ. ಮತ್ತೆ ಶಿವಮೊಗ್ಗ ಜಿಲ್ಲೆಯು ಮಲೆನಾಡಿನ ಮಧ್ಯಭಾಗವಾಗಿದೆ. ಏಕೆಂದರೆ ಶಿವಮೊಗ್ಗ ಜಿಲ್ಲೆಗೆ ಚಿತ್ರದುರ್ಗ ಚಿಕ್ಕಮಗಳೂರು ಮತ್ತು ಹಾಸನ ಇವೆಲ್ಲಾ ಸೇರುತ್ತವೆ. ಆದ್ದರಿಂದ ಶಿವಮೊಗ್ಗದಲ್ಲಿ ಯೂನಿವರ್ಸಿಟಿ ಆಗತಕ್ಕಂತಹದು ಒಳ್ಳೆಯದು ಎಂದು ಶ್ರೀಮಾನ್ ಡಿ. ವಿ. ಅರಸ್‌ರವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಶ್ರೀಮಾನ್ ಡಿ. ವಿ. ಅರಸ್‌ರವರು ಮೈಸೂರು ಯೂನಿವರ್ಸಿಟಿಯ ವೈಸ್ ಚಾನ್ಸಲರ್ ಆಗಿದ್ದರು. ಮತ್ತು ಅವರು ಈ ಯೂನಿವರ್ಸಿಟಿಯ ಬಗ್ಗೆ ಹೆಚ್ಚಿನ ಪರಿಣತೆಯನ್ನು ಹೊಂದಿರುವ ವ್ಯಕ್ತಿಯಾಗಿದ್ದಾರೆ. ಆದ್ದರಿಂದ ಅವರ ವರದಿಯ ಮೇರೆಗೆ ತಾವು ಶಿವಮೊಗ್ಗ ಜಿಲ್ಲೆಗೆ ಒಂದು ಯೂನಿವರ್ಸಿಟಿಯನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತೇ ಅವರು ಒಂದು ಮಾತನ್ನು ಹೇಳಿದ್ದಾರೆ ಅದೇನೆಂದರೆ:

> "the cost of establishment of a university at Shimoga covering the districts of Chickmagalur, Chitradurga and Shimoga will not be much as compared to the cost involved in the establishment of University at Mangalore and Gulbarga."

ನಿಜವಾಗಿಯೂ ಕೂಡ ಈ ಅಂಶವನ್ನು ನಾವು ಗಮನದಲ್ಲಿಟ್ಟುಕೊಂಡು ಅಲ್ಲಿಗೆ ಒಂದು ಯೂನಿವರ್ಸಿಟಿಯನ್ನು ಕೊಡಬೇಕೆಂದು ನಾನು ಸೂಚಿಸುತ್ತೇನೆ. ಈ ಯೂನಿವರ್ಸಿಟಿಗೆ ವೆಚ್ಚದ ದೃಷ್ಟಿಯಲ್ಲಿಯೂ ಕೂಡ ಸರ್ಕಾರಕ್ಕೆ ಅಷ್ಟೇನೂ ವೆಚ್ಚವಾಗುವುದಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಮಂಗಳೂರಿನಲ್ಲಿ ಒಂದು ಯೂನಿವರ್ಸಿಟಿಯನ್ನು ಮತ್ತು ಗುಲ್ಬರ್ಗಕ್ಕೆ ಒಂದು ಯೂನಿವರ್ಸಿಟಿಯನ್ನು ಕೊಟ್ಟಿದ್ದೀರಿ. ಆದ್ದರಿಂದ ತಾವು ಶಿವಮೊಗ್ಗದಲ್ಲಿಯೂ ಸಹಾ ಒಂದು ಯೂನಿವರ್ಸಿಟಿಯನ್ನು ಕೊಡಬೇಕೆಂದು ನಾನು ಸೂಚಿಸುತ್ತೇನೆ. ಮತ್ತೇ ಇನ್ನೊಂದು ವಿಷಯವನ್ನು ಹೇಳಿದ್ದಾರೆ. ಅದೇನೆಂದರೆ:

> "There is no central or federal university in the South except in Hyderadad and among all the universities in Karnataka, one at Shimoga will be ideal for such university and the Government of India could be persuaded later for making it a federal university."

ಎಂದು ಹೇಳಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಶಿವಮೊಗ್ಗದಲ್ಲಿ ಒಂದು ಯೂನಿವರ್ಸಿಟಿ ಮಾಡಿದರೆ ಇದು ಒಂದು ಹೈಡಲ್ ಪ್ಲೇಸ್ ಆಗುತ್ತದೆ. ಆದ್ದರಿಂದ ಇಲ್ಲಿ ಒಂದು ಯೂನಿವರ್ಸಿಟಿಯನ್ನು ಮಾಡಬೇಕೆಂದು ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ. ಇದನ್ನು ನಿಜವಾಗಿಯೂ ಸರ್ಕಾರ ಮಾನ್ಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದನ್ನು ಸರ್ಕಾರ ದೃಷ್ಟಿಯಲ್ಲಿಟ್ಟುಕೊಂಡು ಶಿವಮೊಗ್ಗದಲ್ಲಿ ಯೂನಿವರ್ಸಿಟಿ ಆಗಲೇಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇಷ್ಟು ಮಾತಾಡಲು ಅವಕಾಶ ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

SRI C. M. ARUMUGHAM.—Sir, the Hon. Minister may take more time, therefore, I request you adjourn the House. Let him reply on monday.

MR. DEPUTY SPEAKER.—Now, the House stands adjourned to meet at 1.00 P.M. on Monday.

The House adjourned at fiftytwo Minutes past Twelve of the Clock to meet again at One of the Clock on Monday, the 29th June 1981.